# ಶ್ರೀ ಶಕ್ತಿದರ್ಶನ

ಗುರುಪೂರ್ಣಿಮ ವಿಶೇಷ

## ಆಧ್ಯಾತ್ಮ ಲೋಕದ ಜ್ಞಾನ ದೀವಿಗೆ

ರೂ. 50/- ಸಂಪುಟ – 20 ಸಂಚಿಕೆ–10 ಜೂನ್–ಜುಲೈ 2021



# ದರ್ಶನ ಲೋಕ

**ಗೌರವ ಸಂಪಾದಕರು:**
ಶ್ರೀ ಬಿ.ದೇವದಾಸರಾವ್
ಯೋಗಾಚಾರ್ಯ

**ಸಂಪಾದಕರು:**
ಶ್ರೀಮತಿ ಲೀಲಾ ಪ್ರಭಾಕರ್

**ಸಂಪಾದಕರ ಸಲಹಾ ಮಂಡಳಿ:**
ಶ್ರೀಮತಿ ಜಯಲಕ್ಷ್ಮೀ ಕಾರಂತ್
ಶ್ರೀ ಎ.ರಾಮದಾಸ

**ಮುದ್ರಣ:**
**ಶಂಕರ್ ಗ್ರಾಫಿಕ್ಸ್ ಇಂಕ್**
ಕಲ್ಯಾಣಿ ಗಾರ್ಡನ್ ಕೈಗಾರಿಕಾ ಕ್ಷೇತ್ರ
ಬನಶಂಕರಿ 1ನೇ ಹಂತ
ಅಶೋಕ ನಗರ ಪೋಸ್ಟ್, ಬೆಂಗಳೂರು–50

ಬಿಡಿ ಪ್ರತಿ : ರೂ. 50/–
ವಾರ್ಷಿಕ : ರೂ. 200/–
10 ವರ್ಷಕ್ಕೆ : ರೂ. 2000/–

ಶ್ರೀ ಶಕ್ತಿದರ್ಶನಯೋಗಾಶ್ರಮ (ರಿ)
ಪತ್ರಿಕೆ ವಿಭಾಗ, ಅಂಚೆ – ಎಳತ್ತೂರು,
ಕಿನ್ನಿಗೋಳಿ ದ.ಕ. – 574 150
ದೂರವಾಣಿ : +91 96321 46739

E-ಮೇಲ್: shakthidarshan@gmail.com,
devdas.rao@gmail.com

| | |
|---|---|
| ಶ್ರೀ ಗುರು ಸ್ಮರಣೆ | 3–9 |
| ಗುರುವಾಣಿ | 10 |
| ಪ್ರಶ್ನೋತ್ತರ | 13 |
| ಮೇ ತಿಂಗಳ ಆಶ್ರಮ ಚಟುವಟಿಕೆಗಳು | 17 |
| ಗುರುಬೋಧಾಮೃತ | 19 |
| ಸದ್ಗುರುವಿನ ಸಹಾಯ | 20 |
| ಗುರುಶಿಷ್ಯರ ಪವಿತ್ರ ಬಾಂಧವ್ಯ | 23 |
| ನಿಸ್ವಾರ್ಥತೆಯ ಓರೆಗಲ್ಲು | 25 |

**Bank Details**

Names : Shri Shaktidarshan Yogashram.
Bank : Canara Bank
Branch : Kinnigoli
Mangalore, Karnataka, India
S.B.Account No : 0635101012289
IFSC Code : CNRB0000635

Printed by Shri Srinivas at Shankar Graphics Inc., No. 3, Kalyani Garden Industrial Area, BSK 1st Stage, Ashok Nagar, Post, Bangalore - 560050. Published by Smt. Leela Prabhakar on behalf of Shri Shaktidarshan Yogashram, Elathur post, Kinnigoli, Dakshina Kannada, Karnataka - 574150.

The Ashram or Editorial Board is not responsible for any of the statements and opinions contained herein.

Please consult qualified healthcare practitioners before applying any ofthe health care advice contained herein. Some of the articles herein have been taken from other publications, for non-commercial purpose, with the sole intention of spreading spiritual knowledge, and due acknowledgements have been given to original authors.



www.saveindiancows.org

# ಶ್ರೀ ಗುರು ಸ್ಮರಣೆ



ವಿಶ್ವಮಾತೆ

# ಶ್ರೀ ಗುರು ಸ್ಮರಣೆ




ವಿಶ್ವರೂಪ ದರ್ಶನ

# ಶ್ರೀ ಗುರು ಸ್ಮರಣೆ



ಮಹರ್ಷಿ ವೇದವ್ಯಾಸ

# ಶ್ರೀ ಗುರು ಸ್ಮರಣೆ



ಸದ್ಗುರು ಶ್ರೀ ಲೋಕನಾಥ್



www.saveindiancows.org

# ಶ್ರೀ ಗುರು ಸ್ಮರಣೆ



ಬ್ರಹ್ಮವೇತ ಪರಮಪೂಜ್ಯ ದೇವರಹ ಬಾಬ

# ಶ್ರೀ ಗುರು ಸ್ಮರಣೆ



ಬ್ರಹ್ಮವೇತ ಪರಮಪೂಜ್ಯ ಹನ್ಸ್ ಬಾಬ

# ಶ್ರೀ ಗುರು ಸ್ಮರಣೆ



ಪರಮಪೂಜ್ಯ ಸ್ವಾಮಿ ರಾಮಾ

# ಗುರುವಾಣಿ

## ಗುರುಪೂರ್ಣಿಮೆಯ ಪ್ರೇಮ ಸಿಂಚನ

ಕೋವಿಡ್ 19ರ ಕಠಿಣ ರಣದುಂಧುಬಿಯ ವೇಳೆಯಲ್ಲಿ ಇಡೀ ಜಗತ್ತು ಉಳಿವು ಅಳಿವಿನ ದವಡೆಯಲ್ಲಿ ಒದ್ದಾಡುವ ಕಾಲದಲ್ಲೂ ನಾವು ಕಳೆದ ವರ್ಷದ ಗುರುಪೂರ್ಣಿಮೆಯ ಶುಭ ಸಂದೇಶವನ್ನು ಅಂತರ್ಜಾಲದ ಮೂಲಕ ಎಲ್ಲರಿಗೂ ತಲುಪಿಸಿದ್ದೇವೆ. ಈ ವರ್ಷ ತಕ್ಕಮಟ್ಟಿಗೆ ಒಂದು ಹೆಜ್ಜೆ ಮುಂದಿಡುವಂತಾಗಿದೆ. ಅಂತರ್ಜಾಲದ ಮೂಲಕ ಗುರುಗಳ ಸಮ್ಮುಖದಲ್ಲಿ ನಮ್ಮ ನಿಮ್ಮ ಭೇಟಿ ಈ ಬಾರಿ ನಡೆಯಲಿದೆ. ಇದನ್ನು ನೀವುಗಳು ಮನೆಯಲ್ಲೇ ಕುಳಿತು ನಮ್ಮೊಂದಿಗೆ ಆನಂದಿಸಬಹುದೆಂಬ ಚಿಕ್ಕ ಸಂತೋಷ ನಮ್ಮಲ್ಲಿ ಚಿಗುರುಗೊಳ್ಳುತ್ತಲಿದೆ.

ಈ ಸಲದ ಗುರುಪೂರ್ಣಿಮೆಯನ್ನು ದಿನಾಂಕ 23.07.2021ರಂದು, ಶುಕ್ರವಾರ ಬೆಳಗ್ಗೆ 9.30 ರಿಂದ 10.30ರ ತನಕ ಸುಬೋಧ ಗೀತೆ/ಗುರುಗೀತೆಗಳನ್ನು ನೀವು ಕೇಳಿ ಆನಂದಿಸಬಹುದು. ಪೂಜ್ಯ ಗುರುಗಳ ಭೇಟಿ 10.30ಯಿಂದ 12:00ರ ತನಕ ನಡೆಯಲಿರುವುದು. **“10.30ಯಿಂದ 12:00ರ ತನಕ ನಡೆಯುವ ಆಶೀರ್ವಚನದಲ್ಲಿ ಮಾತ್ರ ಪೂಜ್ಯ ಗುರೂಜಿಯವರೊಂದಿಗೆ ನೇರ ಸಂವಾದ/ ಪ್ರಶ್ನೋತ್ತರಗಳಿಗೆ ಅವಕಾಶವಿರುವುದು”.**

ಕೋವಿಡ್ ನ ಕಷ್ಟಕಾಲದಲ್ಲಿ ಮಾತೆ ಪಾರ್ವತಿಯು ಕಾಳಿಯ ರೂಪದಲ್ಲಿ ಮಾನವ ಸಮುದಾಯವನ್ನು ಸತ್ಯದ ಪಥದಲ್ಲಿ ಮುನ್ನಡೆಯುವಂತೆ ಮಾರ್ಗದರ್ಶನ ಮಾಡಿದ್ದಾಳೆ ಎನ್ನಬಹುದು. ಆಶ್ರಮದ ಎಲ್ಲಾ ಚಟುವಟಿಕೆಗಳು ಸಾಂಗವಾಗಿ ನಡೆದಿವೆ. ಇದಕ್ಕೆ ಮುಖ್ಯ ಕಾರಣವೆಂದರೆ ನಿಮ್ಮ ಪ್ರೀತಿಯ ಬೆಂಬಲ. ನಿಮ್ಮ ಪ್ರೀತಿಯೇ ನಮ್ಮ ಬೆನ್ನೆಲುಬಾಗಿ ನಿಂತಾಗ ನಾವು ಸ್ವಲ್ಪವೂ ಹಿಂಜರಿಯದೆ ನಮ್ಮ ಎಲ್ಲಾ ಚಟುವಟಿಕೆಗಳನ್ನು ಸುಸೂತ್ರವಾಗಿ ನಡೆಸಿದ್ದೇವೆ. ನಮ್ಮ ಆನ್ ಲೈನ್ ಶಿಬಿರಗಳಂತೂ ಬಹಳ ಚೆನ್ನಾಗಿ ಪ್ರೋತ್ಸಾಹಿಸಲ್ಪಟ್ಟಿವೆ. ಮೊತ್ತಮೊದಲ ಬಾರಿಗೆ ಇಡೀ ಭೂಮಿಯ ಮೇಲಿರುವ ಹಲವು ದೇಶಗಳ ಸತ್ಸಂಗಗಳು ಈ ಶಿಬಿರದಲ್ಲಿ ಭಾಗವಹಿಸಿ ನಿರಂತರವಾಗಿ ನಮ್ಮೊಂದಿಗೆ ಕೈಜೋಡಿಸಿವೆ. ಈ ಶಿಬಿರಗಳು ಇನ್ನೂ ನಡೆಯುತ್ತಲೇ ಇವೆ. ನೀವು ಪ್ರೋತ್ಸಾಹವಿತ್ತರೆ ಇಂತಹ ಶಿಬಿರಗಳನ್ನು ಮುಂದೆಯೂ ನಡೆಸಬಹುದೆಂಬ ಅಭಿಪ್ರಾಯ ನಮಗಿದೆ. ನಿಮ್ಮ ನಿಮ್ಮ ಮನೆಯಲ್ಲೇ ಕುಳಿತು ಓಡಾಟ, ಜಗ್ಗಾಟಗಳಿಂದ ದೂರವಾಗಿ ಕಡಿಮೆ ಖರ್ಚಿನಲ್ಲಿ ನಮ್ಮ ನಿಮ್ಮ ಭೇಟಿ ತುಂಬಾ ಸಮಂಜಸವಾಗಿ ನೆರವೇರಲು ಸಾಧ್ಯವಿದೆ.

2022ರಿಂದ ಅಕ್ಟೋಬರ್ ತಿಂಗಳ ವಾರ್ಷಿಕೋತ್ಸವದ ಕಾರ್ಯಕ್ರಮ ಮಾತ್ರ ನಮ್ಮ ನಿಮ್ಮ ಮುಖತ: ಭೇಟಿಗೆ ಅನುವು ಮಾಡಿಕೊಡುವ ಕಾರ್ಯಕ್ರಮವಾಗಲೆಂದು ನಾವು ಭಗವಂತನನ್ನು ಬೇಡುತ್ತೇವೆ. ಉಳಿದೆಲ್ಲಾ ಕಾರ್ಯಕ್ರಮಗಳು ಆನ್ ಲೈನ್ ಮೂಲಕವೇ ಕೆಲವು ವರ್ಷಗಳ ಕಾಲ ಮುಂದುವರೆಸಬೇಕಾಗಿ ಬರಬಹುದು ಎಂಬುದು ನಮ್ಮ ನಂಬಿಕೆ.

ಪ್ರೀತಿಯ ಧ್ಯಾನ ಬಂಧುಗಳೇ, ಬರೆದು ತಿಳಿಸಲು ಅಸಾಧ್ಯವಾದ ರೀತಿಯಲ್ಲಿ ನೀವು ನಮ್ಮೊಂದಿಗೆ ಈ ವಿಷಮ ಪರಿಸ್ಥಿತಿಯಲ್ಲೂ ಬಹಳ ಪ್ರೇಮದಿಂದ ಸಹಕರಿಸಿದ್ದೀರಿ. ನಿಮ್ಮೀ ಪ್ರೇಮವು ನಮ್ಮ ಹೃದಯಾಂತರಾಳದಲ್ಲಿ ಸದಾ ಮಿನುಗುತ್ತಿರುವ ನಕ್ಷತ್ರದಂತೆ ನಮ್ಮ ನಿಮ್ಮ ಆತ್ಮ ಸಿಂಚನದ ಸ್ಪಂದನಕ್ಕೆ ನಾಂದಿಯಾಗಿ ಸದಾ ಉಳಿಯಲಿ ಎಂದು ಪ್ರೀತಿಯಿಂದ ಆಶೀರ್ವದಿಸುವ ನಿಮ್ಮ

– ಗುರೂಜಿ

# ಗುರುವಾಣಿ

## ಈ ಕೋವಿಡ್ ನಿರಂತರವೇ

ಅಲ್ಲ, ಇದು ತಾತ್ಕಾಲಿಕ. ಇಡೀ ಜಗತ್ತನ್ನು ತಲ್ಲಣಿಸಿದ "ಕಾಲರ"ವು ಇಡೀ ಭೂಮಿಯ ಮೇಲಿರುವ ಮಾನವ ಕೋಟಿಯನ್ನು ನಿರ್ಮೂಲನೆಗೊಳಿಸುವಂತಹ ಪರಿಸ್ಥಿತಿಯು ಒಂದನೇ ಜಾಗತಿಕ ಯುದ್ಧದ ಬಳಿಕ ನಮಗೆ ಒದಗಿತ್ತು. ಕಾಲರ ರೋಗವು ಬಂದೊಡನೆ ರೋಗಿಯನ್ನು ಮನೆಯಲ್ಲೇ ಬಿಟ್ಟು ಉಳಿದವರೆಲ್ಲರೂ ಆ ಜಾಗವನ್ನು ಖಾಲಿ ಮಾಡುತ್ತಿದ್ದರು. ಕೆಲವು ದಿನಗಳಲ್ಲಿ ಆತನ ಶವವಿದ್ದ ಗುಡಿಸಲಿಗೇ ಬೆಂಕಿಕೊಟ್ಟು ಶವಸಂಸ್ಕಾರವನ್ನು ಮಾಡುತ್ತಿದ್ದರು. ಅಕ್ಕ ಪಕ್ಕದಲ್ಲಿದ್ದ ಗುಡಿಸಲಿನವರೂ ಕೂಡಾ ಅಷ್ಟರಲ್ಲೇ ಬಿಟ್ಟುಹೋಗಿ ಅದು ಸುಮಾರು ಖಾಲಿಯಾಗಿರುತ್ತಿತ್ತು. ಅದಕ್ಕೂ ಬೆಂಕಿಯಿಡುತ್ತಿದ್ದರು. ಆಗ ಭಾರತದ ಜನಸಂಖ್ಯೆ ಸುಮರು 50 ಕೋಟಿಗೆ ಬಂದು ನಿಂತಿತ್ತು.

ಇಂದಿನ ಈ ಅಧುನಿಕ ಯುಗದಲ್ಲಿ ಕಾಲರದ ಜಾಗದಲ್ಲಿ ಕೋವಿಡ್ ನಿಂದು ಕೇಕೆ ಹಾಕುತ್ತಿದೆ. ಕೋವಿಡ್ ಬಂದ ಹೆದರಿಕೆಯಲ್ಲೇ ಆತ್ಮಹತ್ಯೆ ಮಾಡಿಕೊಂಡವರು ಬಹಳಷ್ಟು ಮಂದಿ. ಕೆಲವರಂತೂ ಧೈರ್ಯದಿಂದ ಎದುರಿಸಿ ಕೋವಿಡ್‌ನ್ನು ಸೋಲಿಸಿದ್ದಾರೆ. ಈ ರೋಗವು ಕಾಲರದಂತೆ ಒಂದು ದಿನ ಭೂಮಿಯಿಂದಲೆ ಮಾಯವಾಗುವುದು ಖಂಡಿತ. ಇಂದಿನ ತನಕ ಯಾವುದೇ ರೋಗವು ಮನುಷ್ಯನನ್ನು ಜಯಿಸಿ ಬದುಕಲಾಗಲಿಲ್ಲ. ಅದೇ ರೀತಿ ಕೋವಿಡ್ ಕೂಡಾ ಭೂಮಿಯಿಂದ ನಿರ್ನಾಮವಾಗಲು ಹೆಚ್ಚು ದಿನ ಬೇಕಾಗಿಲ್ಲ. ಮುಂದಿನ ವರ್ಷವೆ ಇಂತಹ ಒಂದು ಸುಸಂದರ್ಭ ನಮಗೆ ದೊರೆಯಬಹುದು. ಕೋವಿಡ್ ಇಲ್ಲದಿದ್ದರೂ ಅದಕ್ಕಿಂತ ಪ್ರಬಲವಾದ ಬೇರೊಂದು ಹೊಸರೋಗವು ಖಂಡಿತವಾಗಿಯೂ ಜನ್ಮತಾಳುವ ಸಾಧ್ಯತೆಯಿದೆ.



ರೋಗಗಳು ಬರುತ್ತಲೇ ಇರುತ್ತವೆ, ಮಾನವನು ಸಾಯುತ್ತಲೇ ಇರುತ್ತಾನೆ, ಅದರ ನಿವಾರಣೋಪಾಯಗಳು ನಡೆಯುತ್ತಲೇ ಇರುತ್ತವೆ. ಇಂತಹ ವೇಳೆಯಲ್ಲಿ ರೋಗನಿರೋಧಕ ಶಕ್ತಿ ಇಲ್ಲದ ವ್ಯಕ್ತಿಯೇ ಸ್ಮಶಾನವನ್ನು ಸೇರುತ್ತಾನೆ. ಯಾರು ಶರೀರದ ಆರೋಗ್ಯವನ್ನು ಚೆನ್ನಾಗಿ ನೋಡಿಕೊಳ್ಳಬಲ್ಲ, ಆತನು ಮಾತ್ರ ಈ ಯುದ್ಧದಲ್ಲಿ ಗೆದ್ದು ಎದ್ದುನಿಲ್ಲುತ್ತಾನೆ. ಅವನಿಂದ ಮುಂದಿನ

# ಗುರುವಾಣಿ

## ಈ ಕೋವಿಡ್ ನಿರಂತರವೇ

ಜನಾಂಗ ಮುಂದಕ್ಕೆ ಒಯ್ಯಲ್ಪಡುತ್ತದೆ. ಶರೀರ ಮಾಧ್ಯಂ ಕಲು ಧರ್ಮ ಸಾಧನಂ ಎಂಬ ನುಡಿಮುತ್ತು ಎಲ್ಲಾ ಯುಗಗಳಲ್ಲೂ ಸತ್ಯ. ಯಾರು ತಮ್ಮ ಆರೋಗ್ಯವನ್ನು ಚೆನ್ನಾಗಿಟ್ಟುಕೊಂಡು ಶಿಸ್ತಿನ ಸಿಪಾಯಿಯಾಗಿ ಬದುಕುತ್ತಾರೆಯೋ ಅವರು ತಮ್ಮ ಜೀವನವನ್ನು ಉದ್ಧರಿಸಿಕೊಂಡು ಇತರರ ಜೀವನಕ್ಕೆ ಮಾರ್ಗದರ್ಶಕರಾಗಿ ಬರುತ್ತಾರೆ. ಇದಕ್ಕೆ ಬೇಕು ಧೀ ಶಕ್ತಿ. ಧೀ ಶಕ್ತಿ ಇರುವವರು ಮಾತ್ರ ಈ ದಿಸೆಯಲ್ಲಿ ಯೋಧನಾಗಿ ಮುಂದೆ ಬರುತ್ತಾನೆ. ಈ ಧೀಶಕ್ತಿಯು ಇಂದಿನ ಜನಾಂಗಕ್ಕೆ ಅತ್ಯಂತ ಅತ್ಯಗತ್ಯ. ಐಟಿಯಲ್ಲಿ ಕೆಲಸ ಮಾಡುವ ನಮ್ಮ ಹೆಚ್ಚಿನ ಯುವಕರು ಅದರಲ್ಲೂ ಹಣದ ಹಿಂದೆ ಓಡುವ ಯುವಕರು ತಮ್ಮ ಧೀಶಕ್ತಿಯನ್ನು ಕಳಕೊಳ್ಳುವುದನ್ನು ನಾವು ನೋಡುತ್ತಲೇ ಇರುತ್ತೇವೆ. ಇದಕ್ಕೆ ಮುಖ್ಯ ಕಾರಣವೆಂದರೆ ತುಂಬಾ ಹಣ ಸಂಪಾದನೆ ಇರುವಾಗ ಇತರ ಜೀವನದ ಮೌಲ್ಯಗಳನ್ನು ನಿರ್ಲಕ್ಷಿಸುತ್ತಾರೆ. ಅಂಥವರಲ್ಲಿ ಧೀಶಕ್ತಿ ಚಿಗುರುವುದಿಲ್ಲ.

ಧೀಶಕ್ತಿಗೆ ಬಹಳ ಮುಖ್ಯವಾಗಿ ಬೇಕಾದದ್ದು ಮುಂಜಾವಿನ ಬ್ರಾಹ್ಮೀ ಮುಹೂರ್ತ. ಸುಮಾರು 3.30ರಿಂದ 6 ಗಂಟೆಯ ತನಕ ಶುಭವೇಳೆಯಲ್ಲಿ ಏಳುವವನು ಯಾವುದೇ ಅಸಾಧ್ಯತೆಗಳನ್ನು ಸಾಧ್ಯ ಮಾಡಲು ನಾಗಾಲೋಟದಲ್ಲಿ ಧಾವಿಸುವವ–ವನಾಗುತ್ತಾನೆ. ನಮ್ಮ ಯುವಕರಿಗೆ ಒತ್ತಿಹೇಳುವುದೇನೆಂದರೆ, ಜೀವನದಲ್ಲಿ ಒಂದು ಗುರಿಯಿರಬೇಕು. ಸಾಯುವ ತನಕ ಆ ಗುರಿಯತ್ತ ಓಡುವ ಧೀಶಕ್ತಿಯನ್ನು ನಾನು ಸಂಪಾದಿಸಬೇಕು. ಇದಕ್ಕಾಗಿ ಹಗಲು ರಾತ್ರಿ ನಾನು ದುಡಿಯುವವನಾಗಬೇಕು. ಆಗ ಒಂದೊಂದಾಗಿ ನಮ್ಮ ಜೀವನದ ಗುರಿ ಸಫಲತೆಯ ಗುರಿಯತ್ತ ಸಾಗುವುದನ್ನು ನಾವೇ ಸಂತೋಷದಿಂದ ಆಲಂಗಿಸುತ್ತೇವೆ.

ಇಂದಿನ ಯುವಕರೇ, ಇಂದು ನಿಮಗೆ ಎಲ್ಲವೂ ಸಿಗುತ್ತದೆ. ಆದರೆ ಸಿಕ್ಕಿದುದನ್ನು ಉಪಯೋಗಿಸಬೇಕಿದ್ದಲ್ಲಿ ನಿಮಗೆ ಧೀಶಕ್ತಿಯ ಅವಶ್ಯಕತೆ ಬಹಳಷ್ಟಿದೆ. ಏಕಾಗ್ರತೆಯಿಂದ ಬ್ರಾಹ್ಮೀ ಮುಹೂರ್ತದಲ್ಲಿ ಎದ್ದು ಯೋಗ, ಪ್ರಾಣಾಯಾಮ, ಧ್ಯಾನಗಳಿಂದ ದಿನದ ಶುಭಾರಂಭವಾಗಲಿ. ಬಿಡದೇ ಹಠ ಸಾಧನೆ ಮಾಡಿದಾಗ ನಿಮ್ಮ ಪುರೋಗತಿಯ ವೇಗ ಯಾರಿಂದಲೂ ಊಹಿಸಲು ಸಾಧ್ಯವಿಲ್ಲ. ನೀವು ಮೇರು ಪರ್ವತದಂತೆ ಶೋಭಿಸುವಿರಿ. ಸ್ವಾಮಿ ವಿವೇಕಾನಂದರನ್ನು ಮೀರಿಸುವವರು ನೀವಾಗಿರಬೇಕು. ನಿಮ್ಮಂಥವರ ಅಗತ್ಯತೆ ಇಂದು ನಮ್ಮ ದೇಶಕ್ಕಿದೆ. ಶುಭವಾಗಲಿ.

# ಪ್ರಶ್ನೋತ್ತರ

**ಪ್ರ: ಕಿವಿಯೊಳಗೆ ಹೋಗುವ ಮಾತಿಗಿಂತ ಬಾಯಿಂದ ಬರುವ ಮಾತಿನ ಸರಣಿಯು ಮನಸ್ಸಿನಾಳಕ್ಕೆ ಇಳಿಯುವುದಂತೆ. ಈ ಬಗ್ಗೆ ಸ್ವಲ್ಪ ವಿವರಣೆ ಕೊಡಿ.**

ಉ: ನಾವು ಎಷ್ಟು ಕೇಳಿದರೂ ಅದರ ಅರ್ಧ ಅಂಶ ಗಾಳಿಯಲ್ಲಿ ತೇಲಿಹೋಗುವುದು. ಇನ್ನುಳಿದ ಅರ್ಧಂಶ ಕಿವಿಯೊಳಕ್ಕೆ ಹೋದರೂ ಮೆದುಳಿಗೆ ಹೋಗುವ ನರತಂತುಗಳು ಅರ್ಥ ಮಾಡಿಕೊಳ್ಳಲಾಗದೇ ಹೊರಚೆಲ್ಲಲ್ಪಡುವುದು. ಕೊನೆಗುಳಿದ ಕಾಲಂಶ ಮಾತ್ರ ಮೆದುಳಿನೊಳಗೆ ಮೇಲ್ಪದರನ್ನು ಸೇರುವುದು. ಇದರಲ್ಲಿ ಹೆಚ್ಚಿನವು ಸೋಸಿ ಹೋಗಿರುವುದರಿಂದ ಮೆದುಳು ಸ್ವೀಕರಿಸಿದ ಭಾಗ ಅಪೂರ್ಣವಿದ್ದು ಪೂರ್ಣ ವಾರ್ತೆಯ 25% ಮಾತ್ರ ಉಳಿದಿರುವುದರಿಂದ ಕೇಳುಗನಿಗೆ ಇದು ಪೂರ್ಣ ಅರ್ಥವಾಗಲು ಸಾಧ್ಯವಿಲ್ಲ. ವಾರ್ತೆಯು ಅಂಶಗಳು ಅಪೂರ್ಣವಾದುದರಿಂದ ಕೇಳುಗನು ಮುಂದಿನ ಹೆಜ್ಜೆ ಇಡಲು ಇಷ್ಟಪಡಲಾರ.

ಇದೇ ವಾರ್ತೆ ಬಾಯಿಯಿಂದ ಹೊರಚೆಲ್ಲಲ್ಪಟ್ಟಾಗ ತುಂಬಾ ಆಲೋಚಿಸಿಯೇ ಹೇಳುತ್ತಾನೆ. ಇಲ್ಲಿ ವಾರ್ತೆಯನ್ನು ಬಿತ್ತರಿಸುವವನಿಗೆ ಬಹಳಷ್ಟು ಯೋಚನೆ ಮಾಡಿ ವಾರ್ತೆಗಳ ಪರಿಪೂರ್ಣ ತಯಾರಿಯ ಕಾರ್ಯಕ್ರಮ ಮೆದುಳಿನೊಳಗೆಯೇ ನಡೆಯುತ್ತದೆ. ಇದರಿಂದಾಗಿ ಮೆದುಳಿನೊಳಗೆ ಇದು ಆಳವಾಗಿ ಬೇರೂರಲು ಸಾಧ್ಯವಿದೆ. ಬುದ್ಧಿವಂತನು ಇದನ್ನು ನಿರಂತರ ಪ್ರಾರಬ್ಧದ ಕಡೆಗೆ ಶೇಖರಣೆಗೊಳ್ಳದಂತೆ ನೋಡಿಕೊಳ್ಳುವನು . ಅದಕ್ಕಾಗಿ ಆ ರಾತ್ರಿಯಂದು ಮಲಗುವ ಮುನ್ನ ಇಂತಹ ವಾರ್ತೆಗಳನ್ನೆಲ್ಲ ಭಗವಂತನ ಯಾ ಗುರುಗಳ ಚರಣಕಮಲಗಳಲ್ಲಿರಿಸಿ ಅವುಗಳನ್ನೆಲ್ಲಾ ಪ್ರಾರಬ್ಧವಾಗದಂತೆ ನೋಡಿಕೊಳ್ಳಲು ಬೇಡಿಕೊಳ್ಳುವನು. ಈ ರೀತಿಯ ಆಚರಣೆಯಿಂದ ಸಕಲ ಪ್ರಾರಬ್ಧಗಳ ನಿವಾರಣೆಯು ಸಾಧ್ಯವಿದೆ.

**ಪ್ರ: ನನಗೆ ನಾನೇ ಸರ್ವಸ್ವ ಎಂದರೇನು?**

ಉ: ಸತ್ಯದ ಹಾದಿಯಲ್ಲಿರುವವರಿಗೆ ಈ ಮಾತು ಸತ್ಯ. ನನಗೆ ನಾನೆ ಸರ್ವಸ್ವ. ಕಣ್ಣು ಬಿಟ್ಟು ಎಲ್ಲವನ್ನೂ ನೋಡು. ಇಡೀ ಪ್ರಪಂಚದಲ್ಲಿ ಕಾಣುವುದೆಲ್ಲವೂ ನನ್ನದೆ. ಅದರ ಸೃಷ್ಟಿಯೆಲ್ಲವೂ ನನಗಾಗೇ. ಈ ಪ್ರಪಂಚ ಒಂದು ಆಶ್ಚರ್ಯ. ಇಲ್ಲಿ ನನ್ನದಲ್ಲ ಎಂಬ ವಿಷಯವೆ ಇಲ್ಲ. ಸುತ್ತಲೂ ಗೋವುಗಳಿದ್ದರೆ ಅವೆಲ್ಲವೂ ನನಗಾಗಿ ಹಾಲನ್ನು ಕೊಡುತ್ತವೆ. ಅಕ್ಕಪಕ್ಕದಲ್ಲಿರುವ ಗಿಡಮರಗಳೆಲ್ಲವೂ ಕೊಡುವ ಹಣ್ಣು ಹಂಪಲುಗಳು ನನಗಾಗಿಯೇ ಹೊರಚೆಲ್ಲಲ್ಪಟ್ಟಿವೆ. ಹರಿಯುವ ನೀರಿನ ತೊರೆ ಅದರ ಜುಳು ಜುಳು ನಿನಾದ ನನ್ನನ್ನು ಕೈತಟ್ಟಿ ಕರೆಯುತ್ತಿದೆ. ಅದು ಪದೇ ಪದೇ ಹೇಳುತ್ತಿದೆ– ನಿನಗಾಗಿ ನಾನು ಹರಿಯುತ್ತಿದ್ದೇನೆ. ನನ್ನಲ್ಲಿ ಮುಳುಗಿ ಒಂದಾಗಿ ನನ್ನ ಸೊಬಗನ್ನು ನಿನ್ನದನ್ನಾಗಿ ಮಾಡಿಕೋ. ತೆಂಗಿನ ಮರದಲ್ಲಿ ಬೆಳೆದ ಎಳನೀರನ್ನು ಕುಡಿಯುವಾಗ, ಅದರ ರುಚಿಯನ್ನು ವರ್ಣಿಸುವವರಿಲ್ಲ. ಅದು ನನಗಾಗಿ ಸೃಷ್ಟಿಸಲ್ಪಟ್ಟಿತು ಎಂಬ ಅಹಂಭಾವ ನನ್ನಲ್ಲಿ ಬೆಳೆಯುವುದು. ಕಣ್ಣು ಬಿಟ್ಟು ಮನೆಯಲ್ಲಿ ನೋಡುವಾಗ ನನ್ನ ಪ್ರಿಯತಮೆ/ಪ್ರಿಯಕರ ನನಗಾಗಿ ಜನಿಸಿ ಈ ಮನೆಯನ್ನು ಸೇರಿದ್ದಾರೆ. ಭಗವಂತನ ಕರುಣೆ ಏನೆಂದು ಬಣ್ಣಿಸಲಿ? ಸುಂದರವಾದ ಒಂದು ವರ್ಷದ ಮಗು

# ಪ್ರಶ್ನೋತ್ತರ

ಅಂಗಳದಲ್ಲಿ ನವಿಲು ನಾಯಿಗಳೊಂದಿಗೆ ಆಡುವಾಗ ಎಲ್ಲಿಲ್ಲದ ಮಮತೆ ಅಂತರಾಳದಿಂದ ಹರಿದುಬರುವುದು. ಏನೊಂದು ಸುಂದರ ಜಗತ್ತು ಅಂತರಂಗದಲ್ಲಿ ಮೂಡುವುದು. ಸ್ನೇಹಿತರು/ ಸಂಬಂಧಿಕರೊಂದಿಗೆ ಮಿತ್ರಭೋಜನದಲ್ಲಿ ಕುಳಿತು ಪಟ್ಟಾಂಗ ಹೊಡೆಯುತ್ತಾ ಬೆಳದಿಂಗಳ ಪೂರ್ಣಿಮಿಯ ಆಚರಣೆಯ ಸವಿಯೂಟವನ್ನು ಸವಿಯುವಾಗ ಗೆಳೆಯನನ್ನು ನೋಡಿ ಹೆಮ್ಮೆ ಪಡುವ ನನಗೆ ಹೃದಯದಲ್ಲಿ ಮೂಡುವ ಮಾತುಗಳೆಂದರೆ ಇವರೆಲ್ಲರೂ ನನ್ನವರೇ. ದೂರದಿಂದ ಎದ್ದುನಿಂತ ಮಹತ್ತರ ಕಟ್ಟಡ ಹೇಳುತ್ತಾ ಇದೆ. ಇದು ನಿನ್ನ ಶಾಲೆ, ಇಲ್ಲಿ ನೀನು ಓದಿರುವಿ. ಇದು ನಿನ್ನ ಕಾಲೇಜು. ಇಲ್ಲಿ ನೀನು ಮೇಲಿನ ವ್ಯಾಸಂಗ ಮಾಡಿರುವಿ. ಪಕ್ಕದಲ್ಲೇ ಹೈಕೋರ್ಟ್. ಇಲ್ಲಿ ನಿನ್ನ ಉದ್ಯೋಗ, ನೀನು ನ್ಯಾಯವಾದಿಯಾಗಿ ಇಲ್ಲಿ ದುಡಿಯುತ್ತಿರುವಿ. ಸಮೀಪದಲ್ಲಿ ನಿಂತ ಸುಂದರವಾದ ಕಾರುಗಾಡಿ. ಅಯ್ಯೋ ಇದು ನನಗಾಗಿ ಕಾದಿದೆ, ನನ್ನ ಕಾರು ಎಂಬ ಭಾವದ ಉದಯ ಹೃದಯದಲ್ಲಿ. ನಾನು ಕಣ್ಣುಬಿಟ್ಟಾಗ ನನ್ನವರು ಎಷ್ಟು ಮಂದಿ. ಲೆಕ್ಕವಿಲ್ಲದ ಎಣಿಸಲು ಸಾಧ್ಯವಿಲ್ಲದಿದ್ದಷ್ಟು ಜೀವರಾಶಿಗಳೆಲ್ಲವೂ ನನ್ನ ಬಂಧುಗಳು. ಎಲ್ಲರೂ ನನ್ನವರೇ. ಎಲ್ಲವನ್ನೂ ಮುಗಿಸಿ ಆ ರಾತ್ರಿ ನಿದ್ರಾವಶನಾದಾಗ ನಾನು ಕಣ್ಣುಮುಚ್ಚಿರುವೆ. ಅಲ್ಲಿ ನನ್ನವರೆಂದು ಕರೆಯಲ್ಪಡುವವರು ಯಾರೂ ಇಲ್ಲ. ಎಲ್ಲವೂ ಶೂನ್ಯ. ಇರುವವನು ನಾನೊಬ್ಬನೆ ಎಂಬುದು ಅರ್ಥವಾಗುವುದು.

ನಾನಿರುವಾಗ ಎಲ್ಲವೂ ನನ್ನದು. ನಾನಿಲ್ಲದಿರುವಾಗ ಇರುವುದು ಒಂದೇ ಒಂದು. ಅದು ಶೂನ್ಯ ಮಾತ್ರ. ಇರುವಿಕೆ ಎಂಬ ಸುಳ್ಳಿನ ಅರ್ಥ ಆಗ ಮಾತ್ರ ನನಗಾಗುವುದು. ನನ್ನದೆಂಬುದು ಯಾವುದೂ ಇಲ್ಲ.

**ಪ್ರ: ನಾನು ಧ್ಯಾನಕ್ಕೆ ಕುಳಿತಾಗ ಆಲೋಚನೆಗಳೇ ಜಾಸ್ತಿ. ನನಗೆ ಧ್ಯಾನವೇ ಆಗುವುದಿಲ್ಲ ಎಂಬ ಭಾವನೆ ಉದಯಿಸುತ್ತಿದೆ. ದಯಮಾಡಿ ದಾರಿ ತೋರಿಸಿ.**

ಉ: ನಿಮಗೆ ನಿಜವಾದ ಆಧ್ಯಾತ್ಮಿಕ ಹಾದಿಯ ಆಸಕ್ತಿಯಿದೆಯೇ? ಹಾಗಿದ್ದರೆ ಅದಕ್ಕೆ ಪೂರ್ವತಯಾರಿಯನ್ನು ನೀವು ಮಾಡಿಕೊಳ್ಳಬೇಕು. ಆ ತಯಾರಿ ಈ ಕೆಳಗಿನಂತಿರಲಿ. ಆಗ ಮಾತ್ರ ನಿಮಗೆ ಧ್ಯಾನದಾಳಕ್ಕೆ ಇಳಿಯಲು ಸಾಧ್ಯ.

1. ನಿಮ್ಮ ದಿನನಿತ್ಯದ ಜೀವನದಲ್ಲಿ ಸುಳ್ಳುಹೇಳದಿರಿ. ಸುಳ್ಳಿನ ಹಾದಿಯಲ್ಲಿರುವವರಿಗೆ ಧ್ಯಾನಿಸಲು ಸಾಧ್ಯವಿಲ್ಲ.

2. ಕಳ್ಳತನ, ಮೋಸ, ವಂಚನೆಯ ಹಾದಿಯಲ್ಲಿ ನೀವಿದ್ದಲ್ಲಿ ಅದನ್ನು ಬಿಟ್ಟು ಸತ್ಯದ ಹಾದಿಯಲ್ಲಿ ಮುಂದುವರಿಯಲು ಪ್ರಯತ್ನಿಸಿ. ಸತ್ಯದ ಹಾದಿಯನ್ನು ಮಾತ್ರ ಜೀವಾತ್ಮನು ಸ್ವೀಕರಿಸುತ್ತಾನೆ. ಅಸತ್ಯದ ಹಾದಿಯನ್ನಲ್ಲ.

3. ಇತರರ ವಸ್ತುಗಳಿಗಾಗಿ ಆಶಿಸದಿರಿ. ಆಸೆಯೇ ದು:ಖಕ್ಕೆ ಕಾರಣ. ಆಸೆಗಳಲ್ಲಿ ಸಾವಿರಾರು ರೀತಿಯ ಆಸೆಗಳಿವೆ. ಎಲ್ಲವೂ ಧ್ಯಾನಕ್ಕೆ ನಿಷಿದ್ಧ. ಅಂದರೆ ಜೀವಾತ್ಮನು ಸ್ವೀಕರಿಸಲಾರ.

4. ಸಿಟ್ಟನ್ನು ದೂರವಿಡಿ. ಸಿಟ್ಟು, ದ್ವೇಷಗಳಿದ್ದವರ ಸಮೀಪಕ್ಕೆ ಆತ್ಮಸಂವಹನೆ ಆಗಲಾರದು.

5. ಎಲ್ಲರನ್ನೂ ನಿಸ್ವಾರ್ಥವಾಗಿ ಪ್ರೀತಿಸಲು ಪ್ರಯತ್ನಿಸಿ. ಅದುವೇ ನಿಜವಾದ ಪ್ರೀತಿ.

# ಪ್ರಶ್ನೋತ್ತರ

ಪ್ರೀತಿಯಿದ್ದಲ್ಲಿ ಭಗವಂತನು ಇದ್ದಾನೆ. ಆತನ ಸನ್ನಿಧಿಯೂ ಇದೆ. ಪ್ರೀತಿಯಿಂದಲೆ ಧ್ಯಾನಿಸಿ, ಭಗವಂತನೂ ಸಿಗುತ್ತಾನೆ.

6. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಅರಿಷಡ್ವೈರಿಗಳನ್ನು ನಿಮ್ಮಿಂದ ದೂರವಿರಿಸಿ. ಇವುಗಳ ಸಾಮೀಪ್ಯವನ್ನು ಜೀವಾತ್ಮನು ಎಂದೂ ಸಹಿಸಲಾರ.

7. ನೀವು ಈ ಕರ್ಮಭೂಮಿಯಲ್ಲಿ ಜನಿಸಿದ್ದೀರಿ. ಇಲ್ಲಿ ಎಲ್ಲಾ ಜೀವಿಗಳು – ಬ್ಯಾಕ್ಟೀರಿಯಾ, ಅಮೀಬಾ, ಪಾರಾಮೇಸಿಯಂ, ವೈರಸ್ ಗಳಿಂದ ತೊಡಗಿ ಎಲ್ಲಾ ಪ್ರಾಣಿ, ಸಸ್ಯ, ಪಕ್ಷಿ ಸಂಕುಲನಗಳು ನಿರಂತರವಾಗಿ ದುಡಿಯುತ್ತಲೇ ಇರುತ್ತವೆ. ಈ ದುಡಿಮೆ ಆಸೆರಹಿತವಾಗಿದ್ದಾಗ ಇದು ಪೂಜೆಯೇ ಆಗುತ್ತದೆ. ಇದುವೇ ಧ್ಯಾನವಾಗುತ್ತದೆ. ಲಾಭ ಪಡೆಯುವ ಅಪೇಕ್ಷೆಯಿದ್ದು ದುಡಿದಲ್ಲಿ ಅದು ಕರ್ಮಯೋಗ ಆಗಲಾರದು. ನಿಮಗೆ ಧ್ಯಾನವಾಗಲಾರದು. ಇದರಿಂದ ಧ್ಯಾನ ದೂರವುಳಿಯುವುದು.

8. ಹೆಣ್ಣು, ಹೊನ್ನು, ಮಣ್ಣು ಮುಂತಾದ ಸಂಪತ್ತುಗಳ ಮೇಲೆ ಆಸೆಯಿರಿಸಿದಲ್ಲಿ ಆ ಮನಸ್ಸು ಧ್ಯಾನದೆಡೆಗೆ ಸೆಳೆಯಲ್ಪಡುವುದಿಲ್ಲ.

ಮೇಲಿನ ಎಲ್ಲವುಗಳನ್ನು ಪಾಲಿಸುವುದೇ ಪೂರ್ಣ ಶರಣಾಗತಿ ಭಾವ. ಇದುವೇ ಧನಾತ್ಮಕ ಚಿಂತನೆ. ಆಗಲೇ ಅಲ್ಲಿ ನಡೆಯುವುದು ಧ್ಯಾನ.

ಮೇಲಿನದ್ದನ್ನು ಓದಿ ಯಾವ ಕರ್ಮಗಳಲ್ಲಿ ನ್ಯೂನ್ಯತೆ ಇವೆ, ಅವುಗಳನ್ನು ಸರಿಪಡಿಸಿ. ನಿಮಗೆ ಉತ್ತಮ ಧ್ಯಾನವಾಗುವುದರಲ್ಲಿ ಎರಡು ಮಾತಿಲ್ಲ. ಇನ್ನೂ ಧ್ಯಾನವಾಗಿಲ್ಲ ಎಂಬ ಭಾವನೆ ಬಂದಲ್ಲಿ, ಆಶ್ರಮಕ್ಕೆ ಬಂದು ಒಂದು ವರ್ಷದ ಕಾಲ ಗೋಸೇವೆ ಮಾಡಿ ಮೌನ ಧ್ಯಾನ ಮಾಡಿ. ಖಂಡಿತವಾಗಿ ನಿಮಗೆ ಯಶಸ್ಸು ಸಿಗುವುದು.

**ಪ್ರ: ಈಗ ನಡೆಯುತ್ತಿರುವ ನಿಮ್ಮ ಆನ್ ಲೈನ್ ಯೋಗನಿದ್ರಾ ತರಗತಿಯು ಬಹಳ ಜನಪ್ರಿಯವಾಗುತ್ತಲಿದೆ. ಬಹಳಷ್ಟು ಜನರು ಸೇರ್ಪಡೆಯಾಗಲು ತಯಾರಿದ್ದಾರೆ. ಆದರೆ ಜಾಗ ಖಾಲಿಯಿಲ್ಲ ಎಂಬ ಕಾರಣದಿಂದ ಮುಂದಿನ ತರಗತಿಗೆ ಸೇರಲು ಬಹಳಷ್ಟು ಮಂದಿ ತಯಾರಾರಿರುವರು. ನೀವು ಕಲಿಸುವ ಯೋಗನಿದ್ರೆಯ ಮಹತ್ವವನ್ನು ಸ್ವಲ್ಪ ತಿಳಿಸಬೇಕಾಗಿ ವಿನಂತಿ.**

ಉ: ಯೋಗನಿದ್ರೆಯೆಂಬುದು ಒಂದು ಅಸಾಧಾರಣವಾದಂತಹ ಯೋಗ ಪದ್ಧತಿ. ಇದನ್ನು ಬರೆದು ತಿಳಿಸುವುದು ಬಹಳ ಕಷ್ಟ. ಇಡೀ ಬ್ರಹ್ಮಾಂಡದೊಳಗೆ ಯಾತ್ರೆ ಮಾಡುವುದು ಎಷ್ಟು ಸುಲಭವಿದೆಯೋ ಅಷ್ಟೇ ಸುಲಭ ಯೋಗನಿದ್ರೆ. ನಮ್ಮೀ ಶರೀರದೊಳಗೆ ಇಡೀ ಬ್ರಹ್ಮಾಂಡದ ಮೂಲೆ ಮೂಲೆಗಳನ್ನು ಸಂದರ್ಶಿಸುವ ವೈವಿಧ್ಯಪೂರ್ಣ ಹಾದಿಗಳಿವೆ. ಈ ಹಾದಿಗಳು ಕ್ಲಿಷ್ಟವಾಗಿದ್ದರೂ ಅರಿತ ಮೇಲೆ ಅಷ್ಟೇ ಇಷ್ಟವಾಗುವುದು. ಆದುದರಿಂದ ಇದೊಂದು ವಿಶೇಷ ರಸದೌತಣ.

ಹಿಂದೆ ನೀವೆಲ್ಲರೂ ಯೋಗನಿದ್ರಾ ಶಿಬಿರವನ್ನು ಅನುಭವಿಸಿದ್ದೀರಿ. ಅದು ನಿಮ್ಮ ನಿಮ್ಮ ಊರಲ್ಲಿ ಅಥವಾ ಆಶ್ರಮದಲ್ಲಿ ಇರಬಹುದು. ಅಲ್ಲಿ ನೀವು ಗುರುಗಳಿಂದ ಭಾಷಣವನ್ನು ಕೇಳುವಾಗ ಕಣ್ಣುಬಿಟ್ಟು ಅವರನ್ನು ನೋಡುತ್ತಲೋ, ಸುತ್ತಲಿನ ವಾತಾವರಣವನ್ನು ಅನುಭವಿಸುತ್ತಲೂ ಈ ಶಿಬಿರದಲ್ಲಿ ಭಾಗವಹಿಸಿರುವಿರಿ. ಇದು ಬಾಹ್ಯ

# ಪ್ರಶ್ನೋತ್ತರ

ಪ್ರಪಂಚದ ಒಂದು ವ್ಯಾಪಾರದಂತಿದೆ. ಆದರೆ ಈಗ ನೀವು ಭಾಗವಹಿಸುವುದು ಅಂತರ್ಜಾಲದಲ್ಲಿ. ಯೋಗನಿದ್ರೆಯು ಪ್ರಾರಂಭದಲ್ಲೇ ನೀವು ಕೇಳುವುದು ಪೂಜ್ಯ ಗುರೂಜಿಯವರ ಮಾತು. ಇಲ್ಲಿ ಆಶ್ರಮವು ನೆನಪಿನಲ್ಲಿರುವುದಿಲ್ಲ. ಸುತ್ತಲಿನ ವಾತಾವರಣವಂತೂ ಇಲ್ಲವೇ ಇಲ್ಲ. ಆಶ್ರಮದ ಪರಿಸರ ಎಲ್ಲೆಲ್ಲೂ ಏನೂ ಇಲ್ಲ. ನೀವು ನಿಮ್ಮ ಶರೀರದೊಳಗಿದ್ದೇ ಶಿಬಿರ ಪ್ರಾರಂಭ. ಆಗ ಅಲ್ಲಿ ನಡೆಯುವುದು ಒಳಗಿನ ಲೋಕದ ವ್ಯಾಪಾರ. ಅಂತರಂಗದ ಲೋಕದಲ್ಲಿ ಅಸತ್ಯವೆಂಬುದು ಕೊಂಚವೂ ಇಲ್ಲ. ಇದ್ದಲ್ಲಿ ಮನಸ್ಸು ಮಾತ್ರ. ಆ ಮನಸ್ಸನ್ನು ದೂರವಿರಿಸಿ ಗುರುಗಳು ನಿಮ್ಮನ್ನು ಆತ್ಮನ ಸನ್ನಿಧಿಗೆ ಕೊಂಡೊಯ್ದು ಆತ್ಮನ ಸನ್ನಿಧಿಯಲ್ಲಿ ಪ್ರತಿಯೊಂದು ಚಕ್ರಗಳ ಮುಖಾಂತರ ಪ್ರಯಾಣ ತೊಡಗುವುದು. ಪ್ರಾರಂಭದಿಂದಲೇ ಸತ್ಯಲೋಕದ ಅಂತರಂಗದ ಪ್ರಭಾವ ನಮ್ಮಲ್ಲಿ ಬೀರುವುದರಿಂದ ವಿಶೇಷ ಸ್ಪಂದನ ಹಾಗೂ ಜ್ಞಾನದ ಅನುಭವಗಳಿಂದ ಕುಂಡಲಿನೀ ಶಕ್ತಿಯು ಮೇಲ್ಸ್ತರಕ್ಕೆ ಏರುತ್ತಲೇ ಇರುತ್ತದೆ. ಆಗ ಬೇಕಾದಲ್ಲಿ ಸಮಾಧಿಯ ಅನುಭವವೂ ಶಿಬಿರಾರ್ಥಿಗೆ ದೊರೆಯುವುದು. ಆ ಅನುಭವ ಬಂದಾಗ ಆತನು ಭಗವಂತನೊಂದಿಗೆ ಇದ್ದ ಅನುಭವದಂತೆ ಕಾಣುವುದು. ಈ ಅನುಭವ ಬೇರೆಲ್ಲೂ ಸಿಗಲು ಸಾಧ್ಯವಿಲ್ಲ. ಅದುದರಿಂದ ನಮ್ಮೀ ಶಿಬಿರವು ಬಹಳಷ್ಟು ಹೆಸರುವಾಸಿಯಗಿದೆ.

ನಮ್ಮ ಯೋಗನಿದ್ರೆಯು ಹಿಮಾಲಯದ ಪರಂಪರೆಯ ಸಾಧುಗಳಿಂದ ಹೊರಹೊಮ್ಮಲ್ಪಟ್ಟಿದೆ. ಇದರಲ್ಲಿ ಸಾವಿರಾರು ಪಥಸಂಚಲನಗಳಿವೆ. ಇದನ್ನು ಬಲ್ಲವರು ಕೆಲವರು ಮಾತ್ರ. ನಮ್ಮ ಆಶ್ರಮವು ಈ ಹಾದಿಯಲ್ಲಿ 50 ವರ್ಷಗಳ ಪರಿಣತಿಯನ್ನು ಹೊಂದಿದೆ. ಈಗ ಅದು ಪಕ್ವವಾಗಿದೆ. ಇದರಿಂದಾಗಿ ಎಲ್ಲರೂ ಇದರ ರುಚಿ, ಶುಚಿ ಹಾಗೂ ದೈವಿಕ ಮೌಲ್ಯವನ್ನು ಆಸ್ವಾದಿಸುತ್ತಿದ್ದಾರೆ. ಕೋವಿಡ್ ನ ಈ ಕಷ್ಟಕಾಲದಲ್ಲಿ ಇದು ಮಾನಸ ಸರೋವರದ ಪವಿತ್ರ ಜಲದಂತೆ ಜೀವಾತ್ಮನಲ್ಲಿಗೆ ಪಯಣಿಸುವ ಒಂದು ಹಾದಿಯಾಗಿ ಎಲ್ಲರಿಗೂ ಸಂತೋಷವನ್ನಿತ್ತಿದೆ.

ನೀವೂ ಭಾಗವಹಿಸಿ.. ನಿಮ್ಮ ಕುಟುಂಬದವರಿಗೂ ಈ ವಿದ್ಯೆಯನ್ನು ಕಲಿಸಲು ಪ್ರೋತ್ಸಾಹಿಸಿ. ನಿಮ್ಮ ಬಂಧುಮಿತ್ರರಿಗೂ ಆಮಂತ್ರಣವಿತ್ತು ಶಿಬಿರಕ್ಕೆ ಬರಲು ತಿಳಿಸಿ. ಇದರಿಂದ ನಿಮ್ಮ ಜೀವನದ ಆಧ್ಯಾತ್ಮಿಕ ಗುರಿ ಸಫಲವಾಗುವುದು ಖಂಡಿತ ಪೂರ್ಣವಾದಂತೆ.

**ತನ್ನ ಸುಖದಲ್ಲಿ ಹರ್ಷಗೊಳ್ಳದೆ**
**ಇತರರ ದುಃಖದಲ್ಲಿ ಹರ್ಷಗೊಳ್ಳದೆ**
**ಕೊಟ್ಟು ಸಂಕಟಪಡದೇ ಇರುವವನೇ ಸಜ್ಜನ**


# ಮೇ ತಿಂಗಳ ಆಶ್ರಮ ಚಟುವಟಿಕೆಗಳು

ಮೇ ತಿಂಗಳ 1ನೇ ತಾರೀಖಿನಂದು ಆಶ್ರಮದಲ್ಲಿ ಪೂಜ್ಯ ಗುರೂಜಿಯವರಿಂದ ಮಹಾ ಮೃತ್ಯುಂಜಯ ಹೋಮ ನೆರವೇರಿತು. ಸುಮಾರು 11.30ಯ ಹೊತ್ತಿಗೆ ಪೂರ್ಣಾಹುತಿಯ ಬಳಿಕ ಪ್ರಸಾದ ವಿತರಣೆ ನಡೆಯಿತು.

ದಿನಾಂಕ 2ರಂದು ಸಚ್ಚಿಂತನ. ಬೆಳಗ್ಗೆ ಪೂಜ್ಯ ಗುರೂಜಿಯವರು ಬಾಬಾಜಿ ಮಂಚಿನಲ್ಲಿ ಆರತಿ, ಗೋಪೂಜೆ ನೆರವೇರಿಸಿದರು. ಬಳಿಕ ದೀಪ ಪ್ರಜ್ವಲನ, ಪೂಜ್ಯ ಗುರೂಜಿಯವರಿಗೆ ಫಲಪುಷ್ಪ ಸಮರ್ಪಣೆ, ಧ್ಯಾನ, ಯೋಗನಿದ್ರೆ, ಪ್ರಸಾದ ವಿತರಣೆ, ಭೋಜನದೊಂದಿಗೆ ಸಚ್ಚಿಂತನ ಮುಕ್ತಾಯಗೊಂಡಿತು.



ಪೂಜ್ಯ ಗುರೂಜಿಯವರಿಂದ ಗೋಪೂಜೆ



ಪೂಜ್ಯ ಗುರೂಜಿಯವರಿಂದ ಬಾಬಾಜಿ ಮಂಚಿನಲ್ಲಿ ಆರತಿ



ದೀಪ ಪ್ರಜ್ವಲನ



ಪೂಜ್ಯ ಗುರೂಜಿಯವರಿಗೆ ಮಾಲಾರ್ಪಣೆ



ಪೂಜ್ಯ ಗುರೂಜಿಯವರಿಗೆ ಫಲಪುಷ್ಪ ಸಮರ್ಪಣೆ

ಈ ಕೋವಿಡ್ ನ ಸಮಯದಲ್ಲಿ ಆಶ್ರಮದ ಹಸುಗಳಿಗೆ ಎಳನೀರಿನ ಸಿಪ್ಪೆಯ ಆಹಾರವನ್ನು ನೀಡಲಾಗುತ್ತಿದೆ. ಹಸುಗಳಿಗೆ ನೀಡಲು ಸಿಪ್ಪೆಯನ್ನು ತುಂಡರಿಸಿ ತಯಾರು ಮಾಡುತ್ತಿರುವ ನಮ್ಮ ಗೋಪಾಲಕರು ಹೀಗಿದ್ದಾರೆ ನೋಡಿ...

# ಮೇ ತಿಂಗಳ ಆಶ್ರಮ ಚಟುವಟಿಕೆಗಳು





ಎಳನೀರಿನ ಸಿಪ್ಪೆಯನ್ನು ತುಂಡರಿಸುತ್ತಿರುವ ಗೋಪಾಲಕರು

ಆಶ್ರಮವು ಹೊಸದಾಗಿ ಖರೀದಿಸಿರುವ ಜಾಗದಲ್ಲಿ ಮಳೆನೀರಿನ ಶೇಖರಣೆಗಾಗಿ ನಿರ್ಮಾಣವಾಗುತ್ತಿರುವ ಕೆರೆಯಿಂದ ಹೂಳೆತ್ತುವ ಕೆಲಸವನ್ನು ನಮ್ಮ ಗೋಪಾಲಕ ಹುಡುಗರು ಮಾಡುತ್ತಿದ್ದರು. ಅನಿರೀಕ್ಷಿತವಾಗಿ ತೌಕ್ತೆ ಚಂಡಮಾರುತದ ಸುಳಿವು ದೊರಕಿದ ತಕ್ಷಣವೇ ಶೀಘ್ರವಾಗಿ ಕಾರ್ಯತತ್ಪರರಾದ ನಮ್ಮ ಹುಡುಗರು ಮಿಂಚಿನ ವೇಗದಲ್ಲಿ ಕೆರೆಯಿಂದ ಹೂಳನ್ನು ಖಾಲಿ ಮಾಡಿದ ಕ್ಷಣದ ಚಿತ್ರಣ ನಿಮಗಾಗಿ



ಮಳೆ ನೀರಿನ ಶೇಖರಣೆಗಾಗಿ ಕೆರೆಯ ಹೂಳೆತ್ತುತ್ತಿರುವುದು



ಮಳೆ ನೀರಿನ ಶೇಖರಣೆಗಾಗಿ ಕೆರೆಯ ಹೂಳೆತ್ತುತ್ತಿರುವುದು

ಹೂಳೆತ್ತಿ ಮುಗಿದ ದಿವಸ ರಾತ್ರಿ ಪ್ರಾರಂಭಗೊಂಡ ಮಳೆಯಿಂದಾಗಿ ಕೆರೆಯು ನೀರಿನಿಂದ ಆವೃತಗೊಂಡಿತು. ಮಣ್ಣಿನ ಜೊತೆಗೆ ಕೆಂಪು ಕಲ್ಲುಗಳು ಕೆರೆಯೊಳಗೆ ತುಂಬಿದ್ದವು. ನೀರು ತುಂಬಿದ್ದರೂ ಲೆಕ್ಕಿಸದೇ ಕಲ್ಲುಗಳನ್ನು ಹುಡುಕಿ ಹೊರತೆಗೆದು ಪೂಜ್ಯ ಗುರೂಜಿಯವರ ಮನಗೆದ್ದ ಹುಡುಗರ ಕೆಲಸದ ಪರಿ ನಿಮಗಾಗಿ



ಮಳೆ ನೀರಿನಿಂದ ತುಂಬಿಕೊಂಡ ಕೆರೆ

# ಮೇ ತಿಂಗಳ ಆಶ್ರಮ ಚಟುವಟಿಕೆಗಳು

ಇಂತಹ ಪ್ರೇಮತುಂಬಿದ ಸೇವಾಮನೋಭಾವ ಹೊಂದಿದ ಹುಡುಗರನ್ನು ಆಶ್ರಮದ ಗೋಪಾಲನೆಗಾಗಿ ಕಳುಹಿಸಿದ ಪೂಜ್ಯ ಗುರುಗಳಿಗೂ, ಭಗವಂತನಿಗೂ ನಮ್ಮ ಪ್ರಣಾಮಗಳು.

# ಗುರುಬೋಧಾಮೃತ

1. ಅನ್ನದ ಹಸಿವು ಹೇಗೆ ಮನುಷ್ಯನಿಗೆ ನೈಸರ್ಗಿಕವಾಗಿರುತ್ತದೆಯೋ ಅದರಂತೆ ಜ್ಞಾನದ ಹಸಿವೂ ಸಹ ನೈಸರ್ಗಿಕವಾಗಿಯೇ ಇರುತ್ತದೆ. ಊಟ ಮಾಡದ ಹೊರತು ಹೇಗೆ ದೇಹಕ್ಕೆ ಹಿತವೆನಿಸುವುದಿಲ್ಲವೋ ಹಾಗೇ ಸ್ವರೂಪದ ಜ್ಞಾನವಾಗದ ಹೊರತು ಮನುಷ್ಯನ ಆಂತರಿಕ ತಳಮಳ ನಿಲ್ಲುವುದಿಲ್ಲ. ಅದಕ್ಕೋಸ್ಕರ ಶರಣು ಹೋಗುವ ಪದ್ಧತಿ ಇದೆ.

2. ಸದ್ಗುರುವೆಂದರೆ ಸತ್ಯ ಸ್ವರೂಪವನ್ನು ಅರಿತವರು, ಸತ್ಯ ಸ್ವರೂಪದ ಜ್ಞಾನವನ್ನು ಮಾಡಿಕೊಡುವವರು. ಸದ್ಗುರುಗಳು ಜ್ಞಾನ ಛತ್ರವನ್ನು ಹಾಕಿದ್ದು ಯಾರು ತಮ್ಮ ಸಹವಾಸಕ್ಕೆ ಬರುತ್ತಾರೋ ಅವರಿಗೆ ಜ್ಞಾನವನ್ನು ಕೊಡುವದಕ್ಕೋಸ್ಕರ ಅವರು ಯಾವಾಗಲೂ ತತ್ಪರರಾಗಿರುತ್ತಾರೆ. ಜ್ಞಾನ ವಸ್ತುವು ಹೀಗಿದೆ. ಹೇಗೆಂದರೆ ಮನಸ್ಸನ್ನು ಅರ್ಪಿಸದ ಹೊರತು ಬೇರೆ ಯಾವ ಮಾರ್ಗದಿಂದಲೂ ಯಾರಿಗೂ ಕೂಡ ಅದನ್ನು ವಶಪಡಿಸಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಸದ್ಗುರುವು ಮುಮುಕ್ಷುವಿನ ಹತ್ತಿರ ಮನಸ್ಸನ್ನೇ ಬೇಡುತ್ತಾರೆ.

ನನಗೆ ಬೇಕಾದುದು  
ಕಬ್ಬಿಣದ ಸ್ನಾಯುಗಳು  
ಉಕ್ಕಿನ ನರಗಳು ಮತ್ತು  
ಸಿಡಿಲಿನಂಥ ಮನಸ್ಸುಗಳು  
ಅಂತಹ ಕೆಲವೇ ತರುಣರಿಂದ  
ದೇಶದ ಭವಿಷ್ಯವನ್ನೇ ಬದಲಾಯಿಸಬಲ್ಲೆ  
– ಸ್ವಾಮಿ ವಿವೇಕಾನಂದ

# ಸದ್ಗುರುವಿನ ಸಹಾಯ

**ಸದ್ಗುರುವಿನ ಸಹಾಯ**

ಜಗತ್ತಿನಲ್ಲಿ ಅತ್ಯಂತ ದುರ್ಲಬವಾದಂತಹ ಮೂರು ವಿಷಯಗಳಿವೆ:

1. ನರದೇಹ

2. ಮುಮುಕ್ಷುತ್ವ

3. ಸದ್ಗುರುವಿನ (ಸಿದ್ಧಪುರುಷರ) ಸಹಾಯ

84 ಲಕ್ಷ ಯೋನಿಗಳನ್ನು ತಿರುಗುವಾಗ ಅಕಸ್ಮತ್ತಾಗಿ ಮನುಷ್ಯ ದೇಹ ಲಭಿಸಿದರೂ ಮುಮುಕ್ಷುತ್ವದ ಹೊರತಾಗಿ ಮೋಕ್ಷ ಪ್ರಾಪ್ತಿಯಾಗುವುದಿಲ್ಲ. ಬಹಳ ಜನ್ಮದ ಪುಣ್ಯದ ಫಲದಿಂದ ಮುಮುಕ್ಷುತ್ವ ಉತ್ಪನ್ನವಾದರೂ ಸತ್ಪುರುಷರ ಸಹಾಯದ ಹೊರತಾಗಿ ಅವನ ಇಚ್ಛೆಯು ಸಫಲವಾಗುವುದಿಲ್ಲ. ಮಹಾಭಾಗ್ಯದಿಂದ ಸತ್ಪುರುಷರ ಆಶ್ರಯ ಲಭಿಸಿದರೂ ಸಹ ಅವನು ಶ್ರೋತ್ರೀಯ – ಶಾಸ್ತ್ರಜ್ಞ ಹಾಗೂ ಬ್ರಹ್ಮನಿಷ್ಠ ಅಂದರೆ ಬ್ರಹ್ಮಸ್ಥಿತಿಯ ಅನುಭವವನ್ನು ಪಡೆದುಕೊಂಡಂತಹವ ಈ ರೀತಿ ಇರದ ಹೊರತು ಮುಮುಕ್ಷುವು ಮುಕ್ತನಾಗಲು ಸಾಧ್ಯವಿಲ್ಲ.

2. ಸದ್ಗುರುವಿನ ಸಹಾಯವನ್ನು ಪಡೆಯದೇ ಗ್ರಂಥವನ್ನು ಓದುವುದರಿಂದ ಅಥವಾ ಅನ್ಯ ಸಾಧನದಿಂದ ಜನ್ಮದ ಸಫಲತೆಯಾಗುವುದಿಲ್ಲವೇನು? ಎಂದು ಎಷ್ಟೋ ಜನರಿಗನಿಸುತ್ತದೆ, ಆದರೆ ಅಂಗಳದಲ್ಲಿ ನಿಂತುಕೊಂಡರೆ ಸೂರ್ಯನ ಪ್ರಕಾಶ ಕಾಣಿಸುವಾಗ ಅದನ್ನು ಗವಾಕ್ಷಿಯಿಂದ ನೋಡಲು ಪ್ರಯತ್ನಿಸುವುದು ಹೇಗೆ ವ್ಯರ್ಥವೋ ಅದರಂತೆ ಸದ್ಗುರುವಿನಿಂದ ಅಲ್ಪ ಶ್ರಮದಿಂದ ಶಾಶ್ವತ ಆನಂದದ ಸ್ಥಾನವನ್ನು ಮುಟ್ಟಲು ಸಾಧ್ಯವಿರುವಾಗ ಮನುಷ್ಯನು ಅನ್ಯ ಸಾಧನದ ಗೋಜಿಗೆ ಬೀಳುವುದರಲ್ಲಿ ಏನರ್ಥವಿದೆ?

3. ಸದ್ಗುರುವಿಗೆ ಶರಣು ಹೋಗುವುದಕ್ಕೆ ಮೊದಲು ಮನುಷ್ಯನ ಹೃದಯವು ಪರಿಪೂರ್ಣ ಸ್ವಾರ್ಥ ಇಚ್ಛೆಯಿಂದ ತುಂಬಿರುತ್ತದೆ. ಆದ ಕಾರಣ ಅವನು ದು:ಖಿಯಾಗಿ ಜೀವನ ಸಾಗಿಸುತ್ತಾನೆ. ಆದರೆ ಆ ಹೃದಯದಲ್ಲಿ ಸದ್ಗುರುವು ಪ್ರೇಮ ಜ್ಯೋತಿಯನ್ನು ಪ್ರಜ್ವಲಿತಗೊಳಿಸಿದ ಮೇಲೆ ಅವನ ಹೃದಯವು ನಿಸ್ವಾರ್ಥವಾಗುತ್ತಾ ಹೋಗಿ ಅವನು ಸುಖರೂಪನಾಗುತ್ತಾನೆ. ಆದರೆ ಅವನ ಮನುಷ್ಯತ್ವವು ದೈವತ್ವದಲ್ಲಿ ಬೆರೆತು ಹೋಗುತ್ತದೆ.

4. ಮನುಷ್ಯನು ಕೃತಕೃತ್ಯನಾಗುವ ಸಲುವಾಗಿ ಪುಸ್ತಕ, ಮಸ್ತಕ, ಹಸ್ತಕ ಈ ಮೂರರ ಸಹಾಯ ಬೇಕಾಗುತ್ತದೆ. ಮೊದಲು ಶಾಸ್ತ್ರದ ಮೂಲಕ ಸಂತರಿಗೆ ಶರಣುಹೋಗುವುದು. ಆಮೇಲೆ ಸಂತರ ಬೋಧವನ್ನು ತಲೆಯಲ್ಲಿ (ಮಸ್ತಕದಲ್ಲಿ) ಸಂಗ್ರಹಿಸುವುದು ಹಾಗೂ ಬೋಧವು ರೋಮರೋಮಗಳಲ್ಲೂ ವ್ಯಾಪಿಸಿ ಗುರುಗಳ ಹಸ್ತಕ ಅಂದರೆ ಕೃಪೆ ಲಭಿಸುವುದು. ಈ ತ್ರಿವೇಣಿ ಸಂಗಮದಲ್ಲಿ ಸ್ನಾನ ಮಾಡದ ಹೊರತು ಮನುಷ್ಯನಿಗೆ ಆತ್ಮ ಸಾಕ್ಷಾತ್ಕಾರ ಆಗುವುದಿಲ್ಲ.

5. ನಮಗೆ ದೇಹದ ನೆನಪು ಹೇಗೆ ಸಹಜವಾಗಿರುತ್ತದೆಯೋ ಹಾಗೇ ಸತ್ಪುರುಷರಿಗೆ ಸಹಜವಾಗಿ ದೇವರ ನೆನಪಿರುತ್ತದೆ. ಆದ ಕಾರಣ ನಾವು ದೇಹಭ್ಯಾಸದಿಂದ ಬಿಡುಗಡೆಯಾಗಲು ಸಂತರ ಸೂಚನೆಯನ್ನು ವೃತ್ತಿಗಿಳಿಸಬೇಕು. ಅಂದರೆ, ಪೂಜೆ, ಪಾರಾಯಣ, ತೀರ್ಥಯಾತ್ರೆ, ಭಜನೆ, ಜಪ, ನಾಮಸ್ಮರಣೆ, ಧ್ಯಾನ ಮೊದಲಾದ ಒಂದೊಂದೇ ಮೆಟ್ಟಲನ್ನು ಏರುವಾಗ ಕೊನೆಯ ಮೆಟ್ಟಲಾದ ಸಹಜಾವಸ್ಥೆಯನ್ನು ಸಹಜವಾಗಿ ತಲುಪಲು ಸಾಧ್ಯವಾಗುತ್ತದೆ.

6. ಮನುಷ್ಯನ ಕರ್ತವ್ಯವೆಂದರೆ ದೇವರ ವಿಸ್ಮರಣೆಯನ್ನು ಕಳೆಯುವುದು. ಅದಕ್ಕೋಸ್ಕರ, ಸಂತರ ಕಡೆಗೆ ಹೋಗುವುದಿರುತ್ತದೆ. ಅವರು ಹೇಳಿದ ಸಾಧನೆ ಮಾಡಿದ ಮೇಲೆ ವಿಸ್ಮರಣೆಯು ಕಳೆಯುವುದು. ಬೇರು ಸಹಿತ ನಾಶವಾಗುತ್ತದೆ. ಅಂದರೆ ಅಖಂಡ ಸ್ಮರಣೆ ಇರುತ್ತದೆ.

7. ಮನುಷ್ಯನ ಮುಖ್ಯ ಕರ್ತವ್ಯವೆಂದರೆ ಅಶಾಶ್ವತ ಜಗತ್ತಿನಲ್ಲಿ ಗುಪ್ತವಾಗಿ ವಾಸಮಾಡಿಕೊಂಡಿರುವ ಶಾಶ್ವತ ಪರಮೇಶ್ವರನ ಅನುಭವ ಪಡೆಯುವುದೇ ಆಗಿದೆ. ಆದರೆ ಅದು ಸಾಧ್ಯವಾಗುವುದಕ್ಕೋಸ್ಕರ ಮನುಷ್ಯನು ಮೊದಲು ಜಗತ್ತಿನ ನಶ್ವರತೆಯನ್ನು ಗಮನದಲ್ಲಿಟ್ಟುಕೊಂಡು ಮೋಹಕ್ಕೆ ಬಲಿಬೀಳದಂತೆ ಜಾಗೃತನಾಗಿರಬೇಕು. ಅದಕ್ಕಾಗಿ ಸದ್ಗುರುವಿನ ಸಹಾಯದ ಅವಶ್ಯಕತೆಯಿದೆ.

8. ಪ್ರೀತಿಯು ಪರಮೇಶ್ವರನ ವ್ಯಕ್ತಸ್ವರೂಪವಿದೆ. ಆದ್ದರಿಂದ ಪ್ರೀತಿಯ ಸಾಕ್ಷಾತ್ಕಾರ ಅಂದರೆ ಪರಮಾತ್ಮನ ಸಾಕ್ಷಾತ್ಕಾರವೇ ಹೌದು. ಆಚಾರ, ವಿಚಾರ, ಉಚ್ಚಾರ ಇವುಗಳು ಪರಿಪೂರ್ಣ ನಿರುಪದ್ರವಿಯಾಗದ ಹೊರತು

# ಸದ್ಗುರುವಿನ ಸಹಾಯ

ಈ ಅತ್ಯುಚ್ಚ ಪ್ರೀತಿಯ ದರ್ಶನವಾಗುವುದಿಲ್ಲ. ಇದನ್ನು ಸಾಧಿಸುವುದಕ್ಕೋಸ್ಕರವೇ ಸದ್ಗುರುವಿನ ಸಹಾಯದ ಅವಶ್ಯಕತೆಯಿದೆ.

9. ಈಶ್ವರನ ವಿಷಯದಲ್ಲಿ ಆತ್ಮೀಯತೆ ಇರುವುದೇ ನಿಜವಾದ ಭಕ್ತಿ. ತೀರ್ಥಯಾತ್ರೆ, ವ್ರತ, ನೇಮ, ಜಪ ಎಲ್ಲವನ್ನೂ ಮಾಡಿ ಈಶ್ವರನ ಕುರಿತು ಒಂದುವೇಳೆ ಆತ್ಮೀಯತೆ ಇರದಿದ್ದರೆ ಮಾಡಿದ್ದೆಲ್ಲವೂ ನಿರರ್ಥಕವೇ ಸರಿ. ಪರಮೇಶ್ವರನ ವಿಷಯದಲ್ಲಿ ಆತ್ಮೀಯತೆ ಉತ್ಪನ್ನವಾಗುವ ಕುರಿತು ಪ್ರತಿಯೊಂದು ಕೆಲಸವನ್ನೂ ಪರಮೇಶ್ವರನ ಪ್ರೀತ್ಯರ್ಥವಾಗಿ ಮಾಡಬೇಕು. ಪರಮೇಶ್ವರನ ವಿಷಯದಲ್ಲಿ ಆತ್ಮೀಯತೆ ಉತ್ಪನ್ನವಾದರೆ ದುರ್ಗುಣಗಳು ಸಂಪೂರ್ಣವಾಗಿ ಹೃದಯವು ನಿರ್ಮಲವಾಗುತ್ತದೆ. ಅಂದರೆ ಮನುಷ್ಯನು ಹರಿ-ಪ್ರೇಮಿಯಾಗುತ್ತಾನೆ.

10. ಒಮ್ಮೆ ಮನುಷ್ಯನು ಹರಿಪ್ರೇಮಿಯಾದರೆ ಆಮೇಲೆ ಅವನ ಕೈಯಿಂದ ಎಲ್ಲಾ ಕೆಲಸಗಳು ತಪ್ಪಿಲ್ಲದಂತೆ ಸರಿಯಾಗಿ ಹಾಗೂ ಸೌಂದರ್ಯದಿಂದ ತುಂಬಿದ್ದಾಗಿರುತ್ತದೆ. ಈ ಪ್ರೀತಿ, ಭಕ್ತಿ, ಆತ್ಮೀಯತೆ ಉತ್ಪನ್ನವಾಗುವ ಸಲುವಾಗಿ ಯಾರು ಭಕ್ತಿಯ ಮೂಲಕ ಭಗವಂತನ ಪ್ರಾಪ್ತಿಯನ್ನು ಮಾಡಿಕೊಂಡಿರುವರೋ ಅಂತಹ ಸಂತರ ಆಶ್ರಯವನ್ನೇ ಮಾಡಬೇಕು.

11. ವಜ್ರವನ್ನು ಪರೀಕ್ಷಿಸುವ ಕಲೆಯನ್ನು ಅರಿಯಬೇಕಾದರೆ ಸರಾಫನ ಸಹವಾಸದಲ್ಲಿ ಹಲವು ದಿನಗಳು ಕಳೆಯಬೇಕಾಗುತ್ತದೆ. ಅದರಂತೆ ಜ್ಞಾನದೃಷ್ಟಿಯು ಲಭಿಸಬೇಕಾದರೆ ಮುಮುಕ್ಷುವು ಜ್ಞಾನಿಗಳ ಸಹವಾಸದಲ್ಲಿ ಕೆಲವು ದಿನಗಳು ಇರುವುದು ಅವಶ್ಯವಿದೆ.

12. ಹಗಲೂ ರಾತ್ರಿ ನೀರಿನಲ್ಲಿರುವ ಮೀನನ್ನು ನೀರಿನಿಂದ ಹೊರಗೆ ತೆಗೆದಾಗ ಅದು ನೀರಿಲ್ಲದೆ ಚಡಪಡಿಸುತ್ತದೆ ಹಾಗೂ ಪುನ: ನೀರಿನೊಳಗೆ ಬಿಟ್ಟಮೇಲೆ ಶಾಂತವಾಗುತ್ತದೆ. ಅದರಂತೆ ಪರಮೇಶ್ವರನಲ್ಲಿ ಸುಖರೂಪವಾಗಿದ್ದ ಜೀವಿಯು ಪರಮೇಶ್ವರನಿಂದ ವಿಮುಖನಾದರೆ ಮಾಯಾ-ಮೋಹದಲ್ಲಿ ಮಗ್ನವಾಗಿ ಹೋಗುತ್ತಾನೆ ಹಾಗೂ ಮೊದಲಿನ ಸುಖದ ನೆನಪಿನಿಂದ ತಳಮಳಿಸುತ್ತಾನೆ. ಆ ಸುಖವು ಎಲ್ಲಿ ಸಿಗುತ್ತದೆ, ಯಾವಾಗ ಸಿಗುತ್ತದೆಯೆಂದು ಪ್ರತಿಯೊಂದು ವಸ್ತುವಿನಲ್ಲೂ ಆ ಸುಖವನ್ನು ಶೋಧಿಸತೊಡಗುತ್ತಾನೆ. ಆದರೆ ಎಲ್ಲಾ ಕಡೆಗಳಲ್ಲೂ ಕ್ಷಣಿಕ ಸುಖದ ಅನುಭವ ಬರುವುದರಿಂದ ಹೆಜ್ಜೆ ಹೆಜ್ಜೆಗೂ ಅವನು ನಿರಾಶನಾಗಬೇಕಾಗುತ್ತದೆ. ಸದ್ಗುರುಗಳ ಆಶ್ರಯ ದೊರಕಿ ಅವರ ಬೋಧದಿಂದ ವೃತ್ತಿಯು ಅಂತರ್ಮುಖವಾದಾಗ ಜೀವಿಯು ಪರಮೇಶ್ವರನಲ್ಲಿ ಐಕ್ಯವನ್ನು ಹೊಂದಿ ಮೊದಲಿನಂತೆ ಸುಖರೂಪನಾಗುತ್ತಾನೆ. ಅಂದರೆ ಭಕ್ತನಾಗುತ್ತಾನೆ.

13. ಪರಿಪೂರ್ಣ ಸ್ವಾರ್ಥದಿಂದ ತುಂಬಿ ಹೋಗಿರುವುದರಿಂದ ನಿಜಸುಖವು ತೀರಾ ಹತ್ತಿರವಿದ್ದರೂ ಮನುಷ್ಯನು ಆ ಸುಖಕ್ಕೆ ಪರಕೀಯನಾಗುತ್ತಾನೆ. ಅಂದರೆ ದು:ಖಿಯಾಗುತ್ತಾನೆ. ಸಿದ್ಧಪುರುಷರ ಸಹಾಯ ದೊರೆತಾಗ ಅವನಲ್ಲಿ ಪ್ರೇಮದ ಜ್ಯೋತಿ ಪ್ರಜ್ವಲಿತವಾಗಿ ಅವನು ನಿಸ್ವಾರ್ಥಿಯಾಗುತ್ತಾನೆ. ಅಂದರೆ ಸುಖ-ರೂಪನಾಗುತ್ತಾನೆ.

14. ಬಾಹ್ಯ ವೈರಿಗಳೆಷ್ಟೇ ಇದ್ದರೂ ಅವರನ್ನು ಗೆಲ್ಲುವುದು ಮನುಷ್ಯನಿಗೆ ಸುಲಭವಾಗುತ್ತದೆ. ಆದರೆ ಒಳಗಿನ ವೈರಿಗಳಾದ ಕಾಮ- ಕ್ರೋಧ ಮುಂತಾದವುಗಳನ್ನು ಗೆಲ್ಲುವುದು ಅತ್ಯಂತ ಕಠಿಣ ಕೆಲಸವಾಗಿದೆ. ಯಾರು ಜ್ಞಾನಿ ಪುರುಷರ ಸಹಾಯ ಪಡೆದುಕೊಳ್ಳುವರೋ ಅವರಿಗೆ ಮಾತ್ರ ಈ ಕೆಲಸವು ಸುಲಭ ಸಾಧ್ಯವಾಗುತ್ತದೆ. ಆದ್ದರಿಂದ ಸದ್ಗುರು ವಾಂಚೋನಿ ಸಾಪಡೇ ನಾ ಯೋಯಾ ಧರಾವೆ ತೇ ಪಾಯ ಆದೀ ಆದೀ, ಭವಸಾಗರೀ ಯಾ ಗುರುಕೃಪೇ ವಿಣ ನಾಹಿ ತರಣೋಪಾಯ ದಾಸ ಮಣತಿ ವಿಶ್ವಾಸ ಠೇವುನಿ ಧರಿ ಸದ್ಗುರು ಚಿ ಪಾಯ ಎಂದು ಸಂತವಾಣಿಯು ಹೇಳುತ್ತದೆ.

ಅರ್ಥ: - ಸದ್ಗುರುವಿನ ಹೊರತಾಗಿ ಮಾರ್ಗ ಸಿಗುವುದಿಲ್ಲ. ಆದ್ದರಿಂದ ತಕ್ಷಣ ಸದ್ಗುರುವಿಗೆ ಶರಣಾಗಬೇಕು. ಗುರುಕೃಪೆಯ ಹೊರತಾಗಿ ಈ ಭವಸಾಗರವನ್ನು ದಾಟಲು ಬೇರೆ ಯಾವ ಉಪಾಯವಿಲ್ಲ. ದಾಸರು ಹೇಳುತ್ತಾರೆ. ಸದ್ಗುರುವಿನ ಚರಣಗಳಲ್ಲಿ ದೃಢವಿಶ್ವಾಸವನ್ನಿಡು ಎಂದು ಹೇಳುತ್ತಾರೆ.

15. ಕುರುಕ್ಷೇತ್ರದಲ್ಲಿ ಕೌರವರು-ಪಾಂಡವರು ಯುದ್ಧಕ್ಕೆ ಸಜ್ಜಾದರು. ಆದರೆ ಶ್ರೀಕೃಷ್ಣನು ಹೇಳಿದ ಮಾತನ್ನು ಅರ್ಜುನನು ಆಚರಣೆಯಲ್ಲಿ ತರಲು ಎಲ್ಲಿಯವರೆಗೆ ತಯಾರಾಗಲಿಲ್ಲವೋ ಅಲ್ಲಿಯವರೆಗೂ ಕೌರವರು

# ಸದ್ಗುರುವಿನ ಸಹಾಯ

ಸಾಯಲಿಲ್ಲ. ಕೌರವರನ್ನು ಕೊಲ್ಲುವವನು "ನಾನು" ಎಂಬ ಭಾವನೆ ಎಲ್ಲಿಯವರೆಗೆ ಅರ್ಜುನನಿಗಿತ್ತೋ ಅಲ್ಲಿಯವರೆಗೂ ಕೃಷ್ಣನ ಮಾತನ್ನು ಅವನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. "ಕೃಷ್ಣಾ, ನೀನು ನನಗೆ ಶಕ್ತಿಕೊಟ್ಟ ಹೊರತೂ ನನ್ನಿಂದ ಈ ಕೆಲಸ ಸಾಧ್ಯವಾಗುವುದಿಲ್ಲ" ಎಂದು ಹೇಳಿ ಅರ್ಜುನನು ಯಾವಾಗ ಶ್ರೀಕೃಷ್ಣನಿಗೆ ಅನನ್ಯ ಶರಣಾದನೋ ಅ ಕೂಡಲೇ ಅವನಿಗೆ ಕೃಷ್ಣನ ಮಾತನ್ನು ಆಚರಣೆಗೆ ತರುವುದು ಸಾಧ್ಯವಾಯಿತು ಹಾಗೂ ಅರ್ಜುನನು ವಿಜಯಿಯಾದನು. ಅದರಂತೆ ನಮ್ಮ ಹೃದಯವೂ ಸಹ ಕುರುಕ್ಷೇತ್ರವಿದ್ದು ಬೆಳಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವವರೆಗೂ ಅಲ್ಲಿ ಒಂದೇ ಸಮ ಯುದ್ಧ ನಡೆದಿರುತ್ತದೆ. ಆದರೆ ಬಲವಾದ ಶಕ್ತಿಯ ಸಹಾಯವು ದೊರಕದ್ದರಿಂದ ನಾವು ಹೆಜ್ಜೆ ಹೆಜ್ಜೆಗೂ ಹತಾಶರಾಗುತ್ತಿದ್ದೇವೆ. ಸ್ವಪ್ರಯತ್ನದಿಂದ ನಾವು ವಿಜಯಿಯಾಗುತ್ತೇವೆ ಎಂದು ಎಲ್ಲಿಯವರೆಗೂ ನಮಗನಿಸುತ್ತದೆಯೋ ಅಲ್ಲಿಯವರೆಗೆ ಯುದ್ಧದಲ್ಲಿ ಯಶ ಸಿಗುವುದೇ ಇಲ್ಲ. ವಿಜಯಿ-ಯಾಗುವುದಕ್ಕೋಸ್ಕರ, "ದೇವರೇ! ಕಾಮ ಕ್ರೋಧ ಮೊದಲಾದ ಷಡ್ವೈರಿಗಳನ್ನು ನಾನು ಸ್ವಪ್ರಯತ್ನದಿಂದ ನಾಶಮಾಡಲು ಸಾಧ್ಯವಿಲ್ಲ. ನೀನು ನನಗೆ ಶಕ್ತಿ ಕೊಟ್ಟರೇನೇ ವಿಜಯಿಯಾಗುತ್ತೇನೆ" ಎಂದು ಹೇಳಿ ಗುರುರೂಪಧಾರಿ ಪರಮೇಶ್ವರನ ಕರುಣೆಯನ್ನು ಬೇಡಬೇಕು. ಅಂದರೆ ಮಾತ್ರ ಅವನಿಂದ ನಮಗೆ ಸಹಾಯ ದೊರೆತು ನಾವು ಯಶಸ್ವಿಯಾಗುತ್ತೇವೆ.

ಶಿಷ್ಯ : – ಲೋಹವು ಪರಿಸಮಣಿಯಲ್ಲಿ ಅನನ್ಯವಾದರೆ ಅದು ಸುವರ್ಣವಾಗುವಂತೆ ಶಿಷ್ಯನು ಸದ್ಗುರು ಚರಣಗಳಲ್ಲಿ ಲೀನನಾದರೆ ಅವನು ಜ್ಞಾನ ಸಂಪನ್ನನಾಗುತ್ತಾನೆ. ಅಂದರೆ ಆತ್ಮ ಸಾಕ್ಷಾತ್ಕಾರವಾಗುತ್ತದೆ. ಅನಂತರ ಅವನ ಕರ್ತವ್ಯವೆಂದು ಏನೂ ಬಾಕಿ ಉಳಿಯುವುದಿಲ್ಲ.

16. ಶಿಷ್ಯನು ಗುರುಗಳ ಸಹವಾಸದಲ್ಲಿ ಬಹಳ ದಿನಗಳನ್ನು ಕಳೆದರೂ ಸಹ ನಿದ್ರೆ, ಆಲಸ್ಯ, ಅಪ್ರಮಾಣಿಕತೆ, ಉದ್ಧಟತನ ಮುಂತಾದ ದುರ್ಗುಣಗಳು ಅವನಲ್ಲಿರುವವರೆಗೂ ಅವನಲ್ಲಿ ಪ್ರಗತಿಯುಂಟಾಗುವುದಿಲ್ಲ. ಗುರುವಿನ ಮೇಲೆ ಶಿಷ್ಯನ ನಿಸ್ಸೀಮ ಪ್ರೀತಿಯಿಲ್ಲದಿದ್ದರೆ ಅವನಿಗೆ ಗುರುಕೃಪೆಯನ್ನು ಸಂಪಾದಿಸಲು ಸಾಧ್ಯವಾಗುವುದಿಲ್ಲ. ಒಬ್ಬ ವೈದ್ಯನ ಮೇಲೆ ಶ್ರದ್ಧೆ ಇಟ್ಟಂತೆ ಗುರುವಿನ ಮೇಲೆ ಶ್ರದ್ಧೆಯಿಟ್ಟರೆ ಕೆಲಸವು ನಡೆಯುವುದಿಲ್ಲ. ಗುರುವಿನಲ್ಲಿ ಶಿಷ್ಯನ ನಿಸ್ಸೀಮ ಪ್ರೀತಿಯಿದ್ದರೆ ಮಾತ್ರ ಶಿಷ್ಯನು ಭವಸಾಗರವನ್ನು ದಾಟಲು ಶಕ್ತನಾಗುತ್ತಾನೆ.

17. ಶಿಷ್ಯನ ಜ್ಞಾನ ಲಾಲಸೆಯು ನಿಜವಲ್ಲದಿದ್ದರೆ ಗುರುವಿನಲ್ಲಿ ಅವನ ಶ್ರದ್ಧೆಯು ಉಂಟಾಗುವುದಿಲ್ಲ. ಗಾಳಿ ಬೀಸಿದಾಗ ಹಾರಾಡುವ ಹುಲ್ಲುಕಡ್ಡಿಯಂತೆ ಗುರುವಿನಲ್ಲಿ ಸ್ವಾರ್ಥ ಶ್ರದ್ಧೆಯಿದ್ದರೆ ಗುರುವಿನ ನಡತೆಯಲ್ಲಿನ ಮರ್ಮವನ್ನರಿಯದೆ ಅವನ ಮನಸ್ಸು ಶಂಕೆ-ಕುಶಂಕೆಗಳಿಂದ ತುಂಬಿಹೋಗುತ್ತದೆ.

18. ಮಕ್ಕಳು ತಂದೆ-ತಾಯಿಗಳ ಹಾಗೂ ಸ್ತ್ರೀಯು ಪತಿಯ ಅಂಕಿತದಲ್ಲಿ ನಡೆದಾಗ ಅವರ ಸಂಸಾರವು ಸುಖಮಯವಾಗುವಂತೆ ಶಿಷ್ಯನು ಗುರುಗಳ ಅಂಕಿತದಲ್ಲಿ ನಡೆದುಕೊಂಡಾಗ ಪರಮಾರ್ಥ ಮಾರ್ಗದಲ್ಲಿ ಅವನಿಗೆ ಯಾವ ರೀತಿಯಲ್ಲೂ ಅಡಚಣೆಯಾಗದೇ ಅವನು ಸುಖರೂಪನಾಗಿ ನಿಜ ಸ್ಥಾನವನ್ನು ಸೇರುತ್ತಾನೆ.

19. ಸಿದ್ಧ ಪುರುಷರ ನಡತೆಯು ತೀರಾ ಸಾಮಾನ್ಯರಿಗಿಂತ ಬೇರೆಯೇ ಇರುತ್ತದೆ. ಆದ ಕಾರಣ ಹೆಜ್ಜೆ ಹೆಜ್ಜೆಗೂ ಅವರ ನಡತೆಯೊಳಗಿನ ರಹಸ್ಯವನ್ನು ತಿಳಿದುಕೊಂಡು ಶಿಷ್ಯನು ನಡೆಯಬೇಕಾಗುತ್ತದೆ. ಯಾವ ಶಿಷ್ಯನು ಗುರುವಿನ ನಡತೆಯೊಳಗಿನ ರಹಸ್ಯವನ್ನರಿಯುತ್ತಾನೋ ಅವನೊಬ್ಬನೇ ಗುರುಕೃಪೆಯನ್ನು ಸಂಪಾದಿಸುತ್ತಾನೆ.

20. ಶಿಷ್ಯನು ಗುರುಗಳ ಸಾನಿಧ್ಯಕ್ಕೆ ತನ್ನ ಸ್ವಂತ ಉದ್ಧಾರಕ್ಕಾಗಿ ಹೋಗುವುದಿರುತ್ತದೆ. ಆದ್ದರಿಂದ ಅವನು ಬಾಹ್ಯವರ್ತನೆಯ ಕಡೆ ಗಮನವೀಯದೆ ಅವರ ಪ್ರತಿಯೊಂದು ಮಾತನ್ನು ಆದರದಿಂದ ಹೃದಯದಲ್ಲಿ ಸಂಗ್ರಹಿಸಲು ಪ್ರಯತ್ನಿಸಬೇಕು. ಎಷ್ಟೋ ಜನರು ಸ್ವಹಿತ ಸಾಧಿಸುವುದು ಎಂಬುದರ ವಿಪರೀತ ಅರ್ಥ ಕಲ್ಪಿಸಿಕೊಂಡು ಗುರುವು ಯಾವುದನ್ನು ಮಾಡುತ್ತಾರೋ ಅದರ ಅನುಕರಣೆಯನ್ನು ಮಾಡಲು ಹೋಗಿ ಕೊನೆಗೆ ಸ್ವಹಿತವನ್ನೇ ಕಳೆದುಕೊಳ್ಳುತ್ತಾರೆ.

**ಕೆ. ಮುಕ್ತಾ ನಾಯಕ್**

# ಗುರು ಶಿಷ್ಯರ ಪವಿತ್ರ ಬಾಂಧವ್ಯ

ಪ್ರತಿಯೋರ್ವ ಶಿಷ್ಯನನ್ನು ಸ್ವತಂತ್ರ ಸ್ವಾವಲಂಬಿ ವ್ಯಕ್ತಿಯನ್ನಾಗಿ ರೂಪಿಸಲು ಅಣಿ ಮಾಡಿ ಬೆಲೆಬಾಳುವ ಮುತ್ತು ರತ್ನಗಳಂತೆ ಕಂಗೊಳಿಸುವಂತೆ ಮಾಡುವ ದೈವಿಕ ಕಾರ್ಯವನ್ನು ನಿರ್ವಹಿಸುವವರು ಗುರುಗಳು. ಗೋಚರ ಸಮಸ್ಯೆಗಳಲ್ಲದೆ ಒಳಗಿನ ಸಮಸ್ಯೆಗಳಿಗೆ ಪರಿಹಾರ ಕೇವಲ ಆಧ್ಯಾತ್ಮ ಗುರುಗಳಿಂದ ಮಾತ್ರ ಸಾಧ್ಯ. ಅಂದರೆ ಶಿಷ್ಯನಲ್ಲಿ ಆಧ್ಯಾತ್ಮಿಕ ಬೀಜ ಬಿತ್ತಿ, ಬೆಳೆಸಿ ಆತನನ್ನು ಸಂಸ್ಕಾರಯುತ ವ್ಯಕ್ತಿಯನ್ನಾಗಿ ಮಾಡಿ ಉಚ್ಚ ಸಂಸ್ಕೃತಿಯ ವಿಕಸಿತ ವ್ಯಕ್ತಿಯನ್ನಾಗಿ ರೂಪಿಸಿ ಆತ್ಮಪಥದಲ್ಲಿ ಮುನ್ನಡೆಸಿ ಬೆಳೆಸಿ ವಿಶಾಲ ದೈವಿಕ ಸಾಮ್ರಾಜ್ಯಕ್ಕೆ ಹಲವಾರು ಶಿಷ್ಯರನ್ನು ಪ್ರೇಮದ ಕೊಡುಗೆಯಾಗಿ ಪ್ರೇಮದಿಂದ ನೀಡುವವರೇ ಗುರುಗಳು. ಹೀಗಿರುವಾಗ ಗುರುಗಳಿಗೆ ತನ್ನ ಶಿಷ್ಯನು ತನ್ನಾತ್ಮವಾಗಿ ಕಾಣುತ್ತಾನೆ. ಒಳಗಿನಿಂದ ಶಿಷ್ಯರನ್ನು ಆ ರೀತಿಯಲ್ಲಿ ಅವರು ಪ್ರೀತಿಸುತ್ತಾರೆ. ಅಂತೆಯೇ ಶಿಷ್ಯನಿಗಾದರೋ ತನ್ನ ಗುರುಗಳೇ ಪರಮಾತ್ಮ. ಈ ಭಾವದ ನಿಧಿ ಶಿಷ್ಯನಲ್ಲಿ ಸದಾ ನೆಲೆನಿಂತಿರಬೇಕು. ಲೌಕಿಕವಾದ ಯಾವುದೇ ಸಂಬಂಧಗಳಲ್ಲಿ ವ್ಯಾಪಾರತನ, ಚಾಡಿಕೋರತನ, ಪರರ ದೂಷಣೆಯಿಂದ ಸಂಬಂಧವನ್ನು ಇನ್ನಷ್ಟು ಹತ್ತಿರಗೊಳಿಸುವುದು. ಎಲ್ಲವೂ ತಾತ್ಕಾಲಿಕವಾಗಿ ಸಫಲವಾಗಿ ಪ್ರಮುಖ ಪಾತ್ರವನ್ನು ವಹಿಸಿ ಸಂಬಂಧವನ್ನು ಗಟ್ಟಿಗೊಳಿಸುವುದು ಅಷ್ಟೇ ಸತ್ಯ. ಅಲ್ಲಿ ಸತ್ಯದ ಹಾದಿ ಯಾರಿಗೂ ಬೇಕಿಲ್ಲ. ಅಥವಾ ವ್ಯಕ್ತಿಯ ಜ್ಞಾನದ ಕೊರತೆಯೂ ಇದಕ್ಕೆ ಪುಷ್ಟಿ ನೀಡಬಹುದು. ಆದರೆ ಆಧ್ಯಾತ್ಮಿಕತೆ ಇದಕ್ಕೆ ತೀರಾ ವಿರುದ್ಧವಾದುದು. ಇಲ್ಲಿ ನಿಷ್ಕಲ್ಮಷ ಹೃದಯಕ್ಕೆ ಮಾತ್ರ ಪ್ರಾಶಸ್ತ್ಯ. ಆಗಲೇ ಗುರುಗಳ ನುಡಿ ಶಿಷ್ಯನಿಗೆ ಸ್ಪಷ್ಟವಾಗಿ ಅರ್ಥೈಸಲು ಸಾಧ್ಯ. ಆಧ್ಯಾತ್ಮಿಕತೆಯ ಮರ್ಮದ ಅರಿವು ಆಗಲೇ ಸಾಧ್ಯ. ಈ ನಿಟ್ಟಿನಲ್ಲಿ ಗುರು–ಶಿಷ್ಯರ ಸಂಬಂಧ ಕಲ್ಮಷರಹಿತವಾದುದು. ಗುರು–ಶಿಷ್ಯರ ಬಾಂಧವ್ಯ ಹೃದಯವಂತಿಕೆಯ ನೇರ ಮಾರ್ಗದಲ್ಲಿ ಮಾತ್ರ ಏರ್ಪಡಿಸಲೂ, ಬೆಸೆಯಲೂ, ಗಟ್ಟಿಗೊಳಿಸಲೂ ಆಗುವಂಥದ್ದು.

ಗುರು ಶಿಷ್ಯರ ಸಂಬಂಧ ಅನ್ಯೋನ್ಯವಾಗುವುದು ಹೇಗೆ ಸಾಧ್ಯ? ಎಂಬ ಪ್ರಶ್ನೆ. ಇದಕ್ಕೆ ಉತ್ತರವಾಗಿ ಗುರುಸೇವೆ ಹಾಗೂ ಗುರುಗಳು ಶಿಷ್ಯನಿಗೆ ದಯಪಾಲಿಸಿದ ಆಧ್ಯಾತ್ಮ ವಿದ್ಯೆಗಳ ನಿರಂತರ ಅಭ್ಯಾಸ– ಎರಡೂ ಜೊತೆಜೊತೆಯಾಗಿ ಸಾಗಬೇಕು. ಶಿಷ್ಯನ ಪ್ರಾರಬ್ಧ ಕಳೆಯಲು ಹಾಗೂ ಲೌಕಿಕತೆಯಲ್ಲಿ ಬಿದ್ದಾಗ ಮನಸ್ಸನ್ನು ಸಾಕ್ಷೀಭಾವದಿಂದ ನೋಡಲು ಗುರುಸೇವೆ ಹಾಗೂ ಆಧ್ಯಾತ್ಮ ವಿದ್ಯೆಗಳ ನಿರಂತರ ಅಭ್ಯಾಸದ ಕೊಡುಗೆ ಅಪಾರ. ಹೀಗಾದಾಗ ಮೌನ ಅಂಥ ಶಿಷ್ಯನನ್ನು ಆರಿಸಿಕೊಂಡು ಬರುತ್ತಾ ಆಧ್ಯಾತ್ಮಿಕ ಉನ್ನತಿಗೆ ಮತ್ತಷ್ಟು ಪುಷ್ಟಿಯನ್ನು ನೀಡುತ್ತದೆ. ಇನ್ನೊಂದೆಡೆ ಆಧ್ಯಾತ್ಮ ಗುರುಗಳಿಗೆ ಪ್ರಮುಖವಾಗಿ ತನ್ನ ಶಿಷ್ಯಂದಿರು ಆಧ್ಯಾತ್ಮಿಕ ಹಾದಿ ಹಿಡಿದು ಮುಕ್ತ ಸ್ಥಿತಿಯನ್ನು ಅನುಭವಿಸಬೇಕೆಂಬ ಹಂಬಲ ಮಾತ್ರವಿರುವುದರಿಂದ ಈ ನಿಟ್ಟಿನಲ್ಲಿ ಶಿಷ್ಯನು

# ಗುರು ಶಿಷ್ಯರ ಪವಿತ್ರ ಬಾಂಧವ್ಯ

ಮುಂದುವರೆದರೆ ಶಿಷ್ಯನ ಸಂಪೂರ್ಣ ಜವಾಬ್ದಾರಿ ಗುರುಗಳೇ ತೆಗೆದುಕೊಳ್ಳುತ್ತಾರೆ. ಯಾಕೆಂದರೆ ಗುರುಗಳು ಶಿಷ್ಯನಿಗೆ ಪ್ರೇಮದಿಂದ ಹಲವಾರು ಪರೀಕ್ಷೆಗಳನ್ನು ನೀಡಿ ಕೊನೆಗೆ ಲೌಕಿಕತೆಯ ಬಯಕೆಯನ್ನೇ ಸಂಪೂರ್ಣವಾಗಿ ಇಲ್ಲವಾಗಿಸಿದಾಗ ಶಿಷ್ಯನಲ್ಲಿ ಗುರುಗಳ ಪ್ರೇಮ ಐಕ್ಯವಾಗಿ ಆನಂದದ ಹೊನಲನ್ನು ಹರಿಸುತ್ತಾ ಬದುಕನ್ನು ಸುಂದರಮಯವಾಗಿರಿಸುತ್ತಾರೆ. ಆಗ ಶಿಷ್ಯನಿಗೆ ಯಾವ ಲೌಕಿಕ ಸಮಸ್ಯೆಯೂ ಸಮಸ್ಯೆಯಾಗಿ ತೋರಲಾರದು.

ಗುರುಕೃಪೆಯಿಂದ ಶಿಶ್ಯನ ನ್ಯೂನ್ಯತೆಯ ಪರಿಹಾರವು ಶಿಷ್ಯನ ಮೂಲಕ ಪರಿಹಾರವು ತನ್ನಷ್ಟಕ್ಕೇ ಅಗಿಹೋಗುವುದು. ಪ್ರಮುಖವಾಗಿ ಶಿಷ್ಯನಿಗೆ ಲವಲೇಶವೂ ಲೌಕಿಕತೆಯ ಮೋಹವಾಗಲೀ, ಎಳೆಯಾಗಲೀ, ಅದರಲ್ಲಿ ಸಿಲುಕಿಕೊಳ್ಳುವುದಾಗಲೀ ಆಗಬಾರದು. ಆಗ ಶಿಷ್ಯನು ಮನಸ್ಸಿನಿಂದ ಯಾವುದೇ ಕಾರ್ಯವೆಸಗದೇ ಎಲ್ಲಾ ಕಾರ್ಯಗಳನ್ನೂ ಗುರುಗಳೇ ನನ್ನಿಂದ ಮಾಡಿಸುತ್ತಿದ್ದಾರೆ ಎಂಬ ಶರಣಭಾವದೊಂದಿಗೆ ಆಧ್ಯಾತ್ಮಿಕ ಸಾಧನೆಯಲ್ಲಿ ಮಾತ್ರ ತುಡಿತ ಹಾಗೂ ತೀವ್ರತೆಯನ್ನು ಹೊಂದಿ ಗುರುಸೇವೆಗೆ ಸದಾ ಬದ್ಧವಾಗಿರಬೇಕಾಗುತ್ತದೆ. ತಾತ್ಕಾಲಿಕ ಬದ್ಧತೆ ಸಲ್ಲದು. ಆಗ ಮಾತ್ರ ತನ್ನೊಳಗಿರುವ ಸಂತೋಷ, ದು:ಖ ಅಥವಾ ಯಾವುದೇ ಭಾವನೆಗಳನ್ನು ಗುರುಚರಣಗಳಿಗೆ ಆ ಕೂಡಲೇ ಅರ್ಪಿಸುವ ಸಮರ್ಪಣಾಭಾವ ಶಿಷ್ಯನಲ್ಲಿ ಬೆಳೆಯುತ್ತದೆ. ತನ್ನದೆಂಬುದು ಅಲ್ಲಿ ಏನೂ ಉಳಿಯಲಾರದು. ಆ ಶೂನ್ಯ ಭಾವದಲ್ಲಿ ಸಂಪೂರ್ಣವಾಗಿ ಗುರುಗಳೇ ಶಿಷ್ಯನೊಳಗಿದ್ದು ಸಕಲ ಸತ್ಕಾರ್ಯಗಳೊಂದಿಗೆ, ಶಿಷ್ಯನ ಆಧ್ಯಾತ್ಮಿಕ ಉನ್ನತಿಯನ್ನು ಶೀಘ್ರವಾಗಿ ಮಾಡಲು ಸಾಧ್ಯವಾಗುತ್ತದೆ. ಇದು ಶಿಷ್ಯನಿಗೆ ಗುರುವು ನೀಡುವ ತುಂಬು ಪ್ರೇಮದ ಕಾಣಿಕೆ. ಆದ್ದರಿಂದ ಶಿಷ್ಯನು ಗುರುಗಳೊಂದಿಗೆ ಸದಾ ತೆರೆದ ಪುಸ್ತಕವಾಗಿ ಶರಣಭಾವದಲ್ಲಿ ಗುರು–ಚರಣಗಳಿಗೆರಗಿ ಗುರುಕೃಪೆಯನ್ನು ಹೊಂದುವಂತಾಗಬೇಕು. ಆಗ ಮಾತ್ರ ಆರೋಗ್ಯ, ಶಾಂತಿ, ನೆಮ್ಮದಿ, ಆನಂದ ಆ ಶಿಷ್ಯನನ್ನು ಅರಸುತ್ತಾ ಬಂದು ಮನೆ ಮಾಡುತ್ತದೆ. ಇದಕ್ಕೆಲ್ಲಾ ಕಾರಣ ಸದ್ಗುರುಗಳು. ಆದ್ದರಿಂದ ಶಿಷ್ಯನಿಗೆ ಅವರೇ ದೇವರು. ಗುರು– ಶಿಷ್ಯ ಸಂಬಂಧ ಅನೂಹ್ಯ, ಅನುಪಮ.

ಆಕರ – ದೇವೋಪನಿಷತ್ ಭಾಗ 2

**ಶ್ರೀಮತಿ ಭಾರತಿ . ವಿ. ಮೂರ್ತಿ**

# ನಿಸ್ವಾರ್ಥತೆಯೇ ಒರೆಗಲ್ಲು

ಕರ್ಮಯೋಗವನ್ನು ಕುರಿತ ತಮ್ಮ ಒಂದು ಪ್ರವಚನದಲ್ಲಿ ಸ್ವಾಮಿ ವಿವೇಕಾನಂದರು 'ನಿಸ್ವಾರ್ಥತೆಯೇ ದೇವರು' ಎಂಬ ಮಾತನ್ನು ಹೇಳುತ್ತಾರೆ. ವರವಿತ್ತು ಸಲಹುವವನೂ, ನಮ್ಮ ಸು:ಖ ದೂರ ಮಾಡುವವನೂ ದೇವರು ಎಂದುಕೊಳ್ಳುವ ನಮಗೆ ಮೇಲಿನ ಮಾತಿನ ಅರ್ಥ ಸ್ಪಷ್ಟವಾಗುವುದು ತುಸು ಕಷ್ಟವೇ. ನಿಸ್ವಾರ್ಥತೆಯ ಮಹಾಗುಣ ಮನುಷ್ಯನನ್ನು ದೈವತ್ವಕ್ಕೆ ಏರಿಸುವುದೆಂಬುದು ಅವರ ಮಾತಿನ ಅರ್ಥ. ದೈವತ್ವ ಎಂದರೆ ಸ್ವಯಂ ಪರಿಪೂರ್ಣ ಸ್ಥಿತಿ. ಈ ಸ್ಥಿತಿಯನ್ನೇರುವುದು ಜೀವಿತದ ಗುರಿ. 'ತಾಯಿ ನಿನ್ನ ಪಾಲಿಗೆ ದೇವರಾಗಲಿ' ಎಂಬ ವೈದಿಕ ಅನುಶಾಸನವನ್ನು ನಾವು ಕೇಳಿದ್ದೇವೆ. ತಾಯಿಯ ನಿಸ್ವಾರ್ಥತೆ ಯಾರಿಗೆ ತಾನೇ ತಿಳಿದಿಲ್ಲ? ತಾಯಿ ತನ್ನ ಸುಖವನ್ನು ಮರೆತು ಮಗುವಿನ ಲಾಲನೆ, ಪೋಷಣೆಗಳಲ್ಲಿ ಮೈಮರೆಯುತ್ತಾಳೆ. ಕೆಲವೊಮ್ಮೆ ತನ್ನ ಕಂದನನ್ನು ರಕ್ಷಿಸಲು ತನ್ನ ಪ್ರಾಣವನ್ನು ಕೊಡಲೂ ಹಿಂಜರಿಯಳು. ಪ್ರೀತಿಯ ಒಂದು ಲಕ್ಷಣವೇ ಪ್ರೀತಿಸಲ್ಪಡುವ ವ್ಯಕ್ತಿಯ ಸರ್ವತೋಮುಖ ಅಭ್ಯುದಯಕ್ಕಾಗಿ ನಿರಂತರ ಯತ್ನಶೀಲತೆ. ಇಂಥ ನಿಸ್ವಾರ್ಥ ಪ್ರೇಮದಿಂದುದಿಸಿದ ತ್ಯಾಗ, ಸೇವೆಗಳಿಂದಲ್ಲದೆ ಅಸಂಖ್ಯ ಜೀವಿಗಳು ತಮ್ಮ ಕಾಲಮೇಲೆ ತಾವು ನಿಲ್ಲಲು ಸಮರ್ಥರಾದುದು? ಮಾತ್ರವಲ್ಲ, ಇಂಥ ನಿಸ್ವಾರ್ಥ, ಪರಿಶುದ್ಧ ಪ್ರೀತಿಯ ಅಭಿವ್ಯಕ್ತಿಯಾದರೇ, ತಾಯಿಯ ತಾಯ್ತನ ಸಾರ್ಥಕ ಅಥವಾ ಕೃತಕೃತ್ಯ. ಮಗುವು ಆನಂದದಿಂದ ನಕ್ಕು ನಲಿಯುವುದನ್ನು ಕಂಡು ಯಾವ ತಾಯಿ ಆನಂದಿಸುವುದಿಲ್ಲ? ಮಗು ಸದಾ ಆನಂದದಿಂದ ನಗುನಗುತ್ತ ಬೆಳೆಯಲಿ ಎಂಬ ಹಾರೈಕೆ ಯಾವ ತಾಯಿಯ ಹೃದಯದಲ್ಲಿರುವುದಿಲ್ಲ? ತಾಯಿಯ ಪ್ರೀತಿ, ತಾಯಿ–ಮಗು ಇಬ್ಬರಿಗೂ ಆನಂದವನ್ನುಂಟು ಮಾಡುವುದು. ತಾಯಿಯ ಪ್ರೀತಿ ಮಗುವಿನಲ್ಲಿ ರಕ್ಷಣೆಯ ಭಾವವನ್ನು ಉಂಟುಮಾಡಿ ಸುಖ ಕೊಡುತ್ತದೆ.

ಮಗುವು ಸುರಕ್ಷಿತವಾಗಿರುವುದನ್ನು ಕಂಡು ತಾಯಿಗೂ ಹಿತವಾಗಿ ತಾನೂ ಸುರಕ್ಷಿತ ಭಾವನೆಯನ್ನು ಅನುಭವಿಸುತ್ತಾಳೆ. ತಾಯಿ ಮಗುವನ್ನು ಪ್ರೀತಿಸಲಾರಳಾದರೆ, ಅವಳಲ್ಲಿ ಸಂತೃಪ್ತಿಯ, ಧನ್ಯತೆಯ ಭಾವ ಮೂಡಲಾರದು. ಮಗುವಾದರೋ ತಾಯಿಯ ಪ್ರೀತಿಯನ್ನು ಕಂಡರಿಯದಿದ್ದರೆ ಆತ್ಮವಿಶ್ವಾಸವನ್ನಾಗಲೀ, ಇತರರಲ್ಲಿ ವಿಶ್ವಾಸವನ್ನು ಇಡುವುದನ್ನಾಗಲೀ ಕಲಿಯಲಾರದು. ತಾಯಿಯ ನಿಜವಾದ ಪ್ರೀತಿಯನ್ನು ಪಡೆದ ಮಗು ಕೃತಜ್ಞತೆಯ ಮಹಾಗುಣದೊಂದಿಗೆ, ತಾಯಿಯ ಪ್ರೇಮದಿಂದ ದೂರವಾಗುವ ಆಪ್ತತೆ ಅಥವಾ ಆತ್ಮೀಯ ಭಾವನೆಯನ್ನು ಪಡೆಯುವುದು. ಮಾತೃತ್ವದ ಆದರ್ಶವನ್ನು ಮೈಗೂಡಿಸಿಕೊಂಡ ತಾಯಿಯಲ್ಲಿ ಈ ಪ್ರೀತಿ ವಿಶೇಷ ರೀತಿಯಿಂದ ವ್ಯಕ್ತವಾಗುವುದನ್ನು ಕಾಣುತ್ತೇವೆ. ಸಾಮಾನ್ಯವಾಗಿ ಈ ಪರಿಶುದ್ಧ, ನಿಸ್ವಾರ್ಥ ಪ್ರೇಮ ಪರಿಪೂರ್ಣ ರೀತಿಯಲ್ಲಿ ಅಭಿವ್ಯಕ್ತವಾಗದಿದ್ದರೂ, ತಾಯಿಯನ್ನು ಗೌರವಿಸಿ. ಅವಳು ತೋರಿದ ಪ್ರೀತಿ, ವಾತ್ಸಲ್ಯ, ಕರುಣೆಗಳನ್ನೂ ಮಾಡಿದ ಸೇವೆಯನ್ನೂ ಮರೆಯಬೇಡ. ಕೃತಘ್ನನಾಗಬೇಡ. ಹಾಗೆ ಗೌರವಿಸಿದರೆ ಆ ಸದ್ಗುಣಗಳು ನಿನ್ನಲ್ಲಿಯೂ ಮೂಡುತ್ತವೆ. ನಿನ್ನ ಬದುಕಿಗೂ ಸಂತೃಪ್ತಿಯನ್ನು ನೀಡುವುದು. ಆದುದರಿಂದಲೇ ' ಮಾತೃ ದೇವೋಭವ' ಎಂದರು ಋಷಿಗಳು. ತಾಯಿ ಸ್ವಾರ್ಥಿಯಾದರೆ ಎಂಥ ಭೀಕರ ಪರಿಣಾಮವಾದೀತು ಎಂಬುದನ್ನು ಕಲ್ಪಿಸಿಕೊಳ್ಳಬಹುದು. ಪಾಶ್ಚಾತ್ಯ ದೇಶಗಳಲ್ಲಿ (ಇಂಥವರು ಎಲ್ಲ ಕಡೆಗಳಲ್ಲೂ ಇದ್ದಾರೆ) ತಮಗೆ ಮಕ್ಕಳು ಬೇಡ, ತಮ್ಮ ಸೌಂದರ್ಯ ನಾಶವಾಗಿ ಬಿಡುತ್ತದೆ. ಹೆರಿಗೆಯ ಕಷ್ಟ, ಗೋಳು ಬೇಡ ಎಂದು ಹಲವರು ಮಕ್ಕಳನ್ನು ಹೆತ್ತು, ಲಾಲಿಸಿ, ಪಾಲಿಸುವ ಗೋಜಿಗೆ ಹೋಗುವುದಿಲ್ಲ. ವಿವಾಹಿತರಾದ ಅವರು ಗರ್ಭಿಣಿಯರಾದಾಗ ದು:ಖಿತರೇ ಆಗುತ್ತಾರೆ. ಮಕ್ಕಳನ್ನು ಪಡೆದ ಬಳಿಕ ಅವುಗಳ ಆಕ್ರಂದನ, ಕಾಟ, ತುಂಟತನಗಳನ್ನು ಸಹಿಸಲಾರದೇ ಕುಪಿತರಾಗಿ ತೀವ್ರತರದ ದೈಹಿಕ ತೊಂದರೆಯನ್ನುಂಟು ಮಾಡುವ ಶಿಕ್ಷೆಯನ್ನು ವಿಧಿಸುತ್ತಾರೆಂದು ಅಧಿಕೃತ ವರದಿ ತಿಳಿಸುತ್ತದೆ.

# ನಿಸ್ವಾರ್ಥತೆಯೇ ಒರೆಗಲ್ಲು

ಮಕ್ಕಳು ಬದುಕಿನುದ್ದಕ್ಕೂ ದೈಹಿಕ, ಮಾನಸಿಕ ಯಾತನೆಯನ್ನು ಇದರಿಂದ ಅನುಭವಿಸಬೇಕಾಗುವುದು. ಇಲ್ಲಿ ತಾಯಿ ಸ್ವಾರ್ಥಿಯಾದರೆ ತನ್ನ ತಾಯ್ತನದ ಆದರ್ಶದಿಂದ ದೂರ ಸರಿದರೆ, ಅವಳ ಪಾಲಿಗೂ, ಮಕ್ಕಳ ಪಾಲಿಗೂ, ತನ್ಮೂಲಕ ಸಮಾಜದ ಪಾಲಿಗೂ ಎಂಥ ದುರಂತ ಕಾದಿರುತ್ತದೆ ಎಂಬುದನ್ನು ಯೋಚಿಸಬಹುದು.

ಪ್ರೀತಿ ಎಷ್ಟರಮಟ್ಟಿಗೆ ಪರಿಶುದ್ಧವಾಗಿದೆ ಎಂಬುದನ್ನು ತಿಳಿಯಲು ನಿಸ್ವಾರ್ಥತೆಯೇ ಒರೆಗಲ್ಲು. ನಿಸರ್ಗ ಇದನ್ನು ತಾಯಿಯ ಮೂಲಕ ಕಲ್ಪಸಿಕೊಡುತ್ತದೆ. ತಾಯ್ತನದ ಶ್ರೇಷ್ಠ ಜವಾಬ್ದಾರಿಯನ್ನು ನಿಸರ್ಗ ಮಹಿಳೆಗೇ ವಹಿಸಿಕೊಟ್ಟಿದೆ. ಆದರೆ ಆಧುನಿಕ ವಿದ್ಯಾಭ್ಯಾಸ ಮತ್ತು ಯಂತ್ರಯುಗದ ಸೌಲಭ್ಯಗಳನ್ನು ಪಡೆದು ಸ್ವಾತಂತ್ರ್ಯ ಎಂದರೆ ಸ್ವೇಚ್ಛಾಚಾರ ಎನ್ನುವಂತೆ ವರ್ತಿಸುವ ಮನೋವೃತ್ತಿ ಇಂದು ಮುಂದುವರಿದ ದೇಶಗಳಲ್ಲಿ ಬೆಳೆಯುತ್ತಿದೆ. ಸ್ತ್ರೀ ಸ್ವಾತಂತ್ರ್ಯ ಇದು ಕ್ರಮೇಣ ತಾಯ್ತನದ ಆದರ್ಶಕ್ಕೆ ಮಾರಕವಾಗುತ್ತಲಿದೆ. ಸ್ತ್ರೀ ಪುರುಷರ ಸಮಾನತೆಯನ್ನು ಸಾರುವ ಪೊಳ್ಳು ಸುಧಾರಣಾವಾದಿಗಳು ಧಾರ್ಮಿಕ ಹಿನ್ನೆಲೆಯಿಂದ ರಚಿಸಿದ ನಿಯಮಗಳಲ್ಲಿರುವ ಯಾವ ಒಳಿತನ್ನೂ ಕಾಣಲಾರದಾಗಿದ್ದಾರೆ. ಮನುಷ್ಯರನ್ನು ಮೆಟ್ಟಲು ಮೆಟ್ಟಲಾಗಿ ನಿಸ್ವಾರ್ಥತೆಯ ಮೂಲಕ ದಿವ್ಯಾನಂದದ ಸ್ಥಿತಿಗೆ ಕೊಂಡೊಯ್ಯುವುದೇ ಎಲ್ಲ ಧಾರ್ಮಿಕ ನಿಯಮಗಳ ಉದ್ದೇಶ. ಈ ಆದರ್ಶವನ್ನು ಸರಿಯಾಗಿ ತಿಳಿದುಕೊಳ್ಳದೇ ಅಲ್ಲಗಳೆಯುವುದರಿಂದ ಸಮಾಜವನ್ನು ಬೇಗನೇ ದು:ಸ್ಥಿತಿಗೆ ಕೊಂಡೊಯ್ಯಲು ಸಾಧ್ಯವಾಗುವುದಷ್ಟೆ.

**ತಾಯಿಯ ಮಡಿಲು**

ತಮ್ಮ ತಾಯಿಯನ್ನು ಸ್ಮರಿಸಿಕೊಂಡು ಇಳಿವಯಸ್ಸಿನ ಹಿರಿಯ ಆಫೀಸರ್ ಒಬ್ಬರು ಹೀಗೆಂದರು: ನನ್ನ ತಾಯಿ, ನನ್ನ ಹಾಗೂ ನನ್ನ ಸೋದರ ಸೋದರಿಯರ ಮತ್ತು ಬಂಧುಬಳಗದವರೆಲ್ಲರ ಪಾಲಿಗೆ ಭಗವಂತನ ಪ್ರೇಮದ ಪ್ರತೀಕವೇ ಆಗಿದ್ದರೆಂದು ಅವರನ್ನು ಕುರಿತು ಚಿಂತಿಸಿದಾಗಲೆಲ್ಲ ನನಗನ್ನಿಸುತ್ತಿದೆ. ಅವರ ಹೆಸರಾದರೋ ಕೃಪಾ. ಅವರು ಭಗವಂತನ ಕೃಪೆಯ ಮೂರ್ತಿವೆತ್ತಾದ ರೂಪ ಎಂದೇ ನಾನು ನಂಬುವಂತಾಗಿತ್ತು. ಎಂದೆಂದೂ ಕುಂದದ, ಬತ್ತಿ ಬರಿದಾಗದ ಪ್ರೀತಿಯ ಸ್ವಭಾವ, ಕಷ್ಟ ಕಂಟಕಗಳನ್ನು ಎದುರಿಸುವ ದೃಢಮನಸ್ಸು, ಒಳ್ಳೆಯದಾಗಿಯೇ ತೀರುವುದೆಂಬ ಭರವಸೆ, ತಪ್ಪುಗಳನ್ನು ತಿದ್ದುವಲ್ಲಿ ಅಪಾರ ತಾಳ್ಮೆ, ಹೊಗಳಿಕೆಗೆ ಬಾಯ್ಬಿಡದ ಮನೋವೃತ್ತಿ, ಭಗವಂತನಲ್ಲಿ ಮತ್ತು ಆತನ ಮಾರ್ಗದರ್ಶನದಲ್ಲಿ ಎಂದೆಂದೂ ಅಲುಗಾಡದ ಶ್ರದ್ಧೆ, ಯಾರಿಂದಲೂ ಏನನ್ನೂ ಅಪೇಕ್ಷಿಸದ ನಿತ್ಯ ಆಂತರಿಕ ತೃಪ್ತಿಯ ನಡೆ. ಇವು ನನ್ನ ಮನಸ್ಸಿನಲ್ಲಿ ಮೂಡಿಸಿದ ಪ್ರಭಾವ ಅಳಿಸಲಾಗದ್ದು. ಆ ಸದ್ಗುಣಗಳ ಸುಗಂಧ ಅಲೆ ಅಲೆಯಾಗಿ ಬಂದು ನನ್ನನ್ನು ಮೈಮರೆಯುವಂತೆ ಮಾಡುತ್ತದೆ. ತೀರಿಕೊಳ್ಳುವುದಕ್ಕೆ ಒಂದೆರಡು ವರ್ಷಗಳ ಮೊದಲಂತೂ ಅವರ ನಿರ್ಲಿಪ್ತತೆ, ಎಲ್ಲರೆಡೆಗಿನ ಪ್ರೀತಿ, ತಪ್ಪು ತಡೆಗಳಿಲ್ಲದ ಅಂತರ್ದೃಷ್ಟಿ ಇವು ಅವರನ್ನು ಒಬ್ಬ ತಪಸ್ವಿನಿಯ ಮಟ್ಟಕ್ಕೆ ಏರಿಸಿದ್ದವು. ಅವರು ನಮ್ಮೊಂದಿಗಿದ್ದಾರೆ ಎಂಬ ಯೋಚನೆಯೇ ಮನಸ್ಸಿಗೆ ನೆಮ್ಮದಿಯನ್ನುಂಟುಮಾಡುತ್ತಿತ್ತು. ಉದ್ಯೋಗಕ್ಕಾಗಿ ಬೇರೆ ಬೇರೆ ಊರುಗಳಲ್ಲಿದ್ದ ನಾವು, ವರ್ಷಕ್ಕೊಂದು ಬಾರಿ ತಾಯಿಯ ಸಾನ್ನಿಧ್ಯದಲ್ಲಿ ಕಾಲಕಳೆಯಲು ಹಾತೊರೆಯುತ್ತಿದ್ದೆವು. ಯೌವನದಲ್ಲಿ ಅವರನ್ನು ಪ್ರೀತಿ, ಸಲಿಗೆಗಳಿಂದ ನೋಡುತ್ತಿದ್ದರೂ, ಇಂದು ಗೌರವಮಿಶ್ರಿತ ಭಕ್ತಿ ನನ್ನ ಹೃದಯದಲ್ಲಿ ತುಂಬಿ ಬರುತ್ತಲಿದೆ.– ಅಯ್ಯೋ, ಅವರಿದ್ದಿದ್ದರೆ ! ಅವರನ್ನು ಕಳೆದುಕೊಂಡೆವಲ್ಲ! ಎನಿಸುತ್ತಿದೆ.

ಇಡಿಯ ಕುಟುಂಬ ಇಂಥ ತಾಯಿಯ ಚಾರಿತ್ರ್ಯದಿಂದ ಪ್ರಭಾವಿತವಾಗದಿರಲು ಸಾಧ್ಯವಿದೆಯೆ?

ಆಕರ – ದೇವೋಪನಿಷತ್ ಭಾಗ 2

**ಶ್ರೀಮತಿ ಭಾರತಿ . ವಿ. ಮೂರ್ತಿ**

# ನಮ್ಮ ದೇಸೀ ಹಸುಗಳನ್ನು ರಕ್ಷಿಸಲು ದೇಣಿಗೆ ನೀಡಿ

ನಿಮ್ಮ ದೇಣಿಗೆಯನ್ನು ನೇರವಾಗಿ ಬ್ಯಾಂಕ್ ಎಕೌಂಟ್ ಗೆ ಕಳುಹಿಸಬಹುದು ಅಥವಾ ಚೆಕ್/ಡಿ ಡಿ ಮೂಲಕವೂ ಕಳುಹಿಸಬಹುದು.

ದೇಣಿಗೆಯು ಆಶ್ರಮಕ್ಕಾಗಿದ್ದಲ್ಲಿ ದಯಮಾಡಿ ಈ ಕೆಳಗಿನ ಬ್ಯಾಂಕ್ ಎಕೌಂಟ್ ಸಂಖ್ಯೆಗೆ ಜಮಾ ಮಾಡಬೇಕಾಗಿ ಕೋರಿಕೆ:

| | |
|---|---|
| ಹೆಸರು | : ಶ್ರೀ ಶಕ್ತಿದರ್ಶನ ಯೋಗಾಶ್ರಮ |
| ಎಕೌಂಟ್ ಸಂಖ್ಯೆ | : 0635101012289 |
| ಬ್ಯಾಂಕ್ ಮತ್ತು ಶಾಖೆ | : ಕೆನರಾ ಬ್ಯಾಂಕ್, ಕಿನ್ನಿಗೋಳಿ ಶಾಖೆ |
| ಐ ಎಫ್ ಎಸ್ ಕೋಡ್ | : **CNRB0000635** |

ದೇಣಿಗೆಯು ಗೋಶಾಲೆಗಾಗಿದ್ದಲ್ಲಿ ಈ ಕೆಳಗಿನ ಬ್ಯಾಂಕ್ ಎಕೌಂಟ್ ಸಂಖ್ಯೆಗೆ ಜಮಾ ಮಾಡಬೇಕಾಗಿ ಕೋರಿಕೆ:

| | |
|---|---|
| ಹೆಸರು | : ಓಂ ಪ್ರಕೃತಿಧಾಮ ಟ್ರಸ್ಟ್ |
| ಎಕೌಂಟ್ ಸಂಖ್ಯೆ | : 01225001006124‌01 |
| ಬ್ಯಾಂಕ್ ಮತ್ತು ಶಾಖೆ | : ಕರ್ನಾಟಕ ಬ್ಯಾಂಕ್, ಫೌಂಡರ್ಸ್ ಶಾಖೆ, ಮಂಗಳೂರು |
| ಐ ಎಫ್ ಎಸ್ ಕೋಡ್ | : **KARB0000475** |

ಎಲ್ಲಾ ದೇಣಿಗೆಗಳು ಆದಾಯ ತೆರಿಗೆ 1961ರ 80ಜಿ ಸೆಕ್ಷನ್ ಅಡಿಯಲ್ಲಿ ತೆರಿಗೆ ವಿನಾಯಿತಿ ಹೊಂದಿರುವುವು. ದೇಣಿಗೆಯ ರಸೀತಿಗಳನ್ನು ವಿಳಾಸಗಳಿಗೆ ಕಳುಹಿಸಿಕೊಡಲಾಗುವುದು. ದೇಣಿಗೆ ನೀಡಿರುವುದರ ಕುರಿತು ದಯವಿಟ್ಟು **shakthidarshan@gmail.com** ಅಥವಾ **surabhivana@gmail.com** ಗಳಿಗೆ ಇ ಮೈಲ್ ಮೂಲಕ ತಿಳಿಸಬೇಕಾಗಿ ಕೋರಿಕೆ.

# SURABHIVANA



**www.saveindiancows.org**

Registered with RNI Under No. KAR/KAN/01/10750
Licensed to post without pre payment License No. SK/WPP/MNG/180/2021-23
Registeration No. MNG/957/2021-23

Posted at Kinnigoli Post Office Date of Posting 05th of every month
Date of Publication : 29th of every month

If undelivered please return to
**SHRI SHAKTIDARSHAN YOGASHRAMA(R)**
Magazine Section, P.O. Elathur, Kinnigoli, D.K., Karnataka - 574 150
www.yogashrama.in